

# कर्णाटकसंस्कृतविश्वविद्यालयः
# वार्तापत्रम्

## ಕರ್ನಾಟಕಸಂಸ್ಕೃತವಿಶ್ವವಿದ್ಯಾಲಯಃ – ವಾರ್ತಾಪತ್ರಮ್



ಕನ್ನಡ–ಸಂಸ್ಕೃತ ತ್ರೈಮಾಸಿಕ ಪತ್ರಿಕೆ | ಸಂಪುಟ: 01 | ಸಂಚಿಕೆ: 01 | ಜನವರಿ, 2011 | ಬೆಲೆ: ರೂ. 10/–



ಕುಲಪತಿಗಳು

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

ಸಂಪಾದಕರು:

**ಡಾ. ನಾಗರತ್ನಾ ಹೆಗಡೆ**

ಸಂಪಾದಕ ಸಲಹಾ ಮಂಡಳಿ:

**ಪ್ರೊ. ಎ.ವಿ. ನಾವಡ**

**ಪ್ರೊ. ಸಿ. ನಂಜುಂಡಯ್ಯ**

**ಪ್ರೊ. ಟಿ.ಎನ್. ಪ್ರಭಾಕರ**

**ಡಾ. ಕೆ.ಎಂ. ಮಹದೇವಯ್ಯ**

**ಡಾ. ಎಚ್. ವೆಂಕಟೇಶಪ್ಪ**



ಪ್ರಕಾಶಕರು:

**ಕುಲಸಚಿವರು**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ
ಮಹಾಪಾಠಶಾಲೆ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – 560 018.

**ಖಾಸಗಿ ಪ್ರಸಾರಕ್ಕಾಗಿ**

ಚಂದಾ ವಿವರ:

| | |
|---|---|
| ಬಿಡಿ ಪ್ರತಿ | ` 10.00 |
| ವಾರ್ಷಿಕ | ` 40.00 |
| ತ್ರೈವಾರ್ಷಿಕ | ` 120.00 |

**(ಚಂದಾದಾರರು ಪೋಸ್ಟಲ್ ಆರ್ಡರ್ ಅಥವಾ ಡಿ.ಡಿ.ಯನ್ನು 'ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು' ಈ ಹೆಸರಿಗೆ ಕಳುಹಿಸಿಕೊಡುವುದು.)**




## ಸಂದೇಶ

ಸಂಸ್ಕೃತ ಭಾಷೆಯ ವಿಶೇಷಾಧ್ಯಯನ–ಸಂಶೋಧನೆಗಾಗಿಯೇ ಕರ್ನಾಟಕ ಸರಕಾರದಿಂದ ಸಂಸ್ಕೃತ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದಿರುವುದು ಸಮಂಜಸವಾಗಿದೆ. ಈಗ ಅದರ ಶುಭೋದಯವಾಗಿದೆ ಎಂಬುದು ಮಹಾನಂದಕರ ವಿಷಯ. ಈ ನಿಮಿತ್ತ ಸಂಸ್ಕೃತ ತ್ರೈಮಾಸಿಕ ವಾರ್ತಾಪತ್ರದ ಪ್ರಕಟಣೆ ಅತೀವ ಆನಂದದಾಯಕವಾಗಿದೆ. ಸಂಸ್ಕೃತ ಭಾಷೆಯ ಅಪರಿಮಿತವಾದ ಜ್ಞಾನದಾನವು ಮನುಜ ಕುಲಕ್ಕೆ ಮಹಾಯೋಗವಾಗಿದೆ ಮತ್ತು ಮಹಾಭಿಮಾನದ ಸಂಗತಿಯಾಗಿದೆ. ಸಂಸ್ಕೃತ ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳ ಮುಖವಾಣಿ ರೂಪದಲ್ಲಿ ಬರಲಿರುವ ಈ ತ್ರೈಮಾಸಿಕ ವಾರ್ತಾಪತ್ರವು ಸಕಲರಿಗೆ ಒಂದು ಪ್ರೇರಣೆಯನ್ನು ಹಾಗೂ ಚೇತನವನ್ನು ನೀಡಲೆಂದು ಹಾರೈಸುತ್ತ ಶುಭ ಕೋರುವೆನು.

**ಡಾ. ವಿ.ಎಸ್. ಆಚಾರ್ಯ**
**ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ**
**ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು**
**ಜೈವಿಕ ತಂತ್ರಜ್ಞಾನ ಸಚಿವರು**

# ಕುಲಪತಿಗಳ ಮಾತು

**ಲಸತು ಸಂಸ್ಕೃತಮ್ ಚಿರಂ ಗೃಹೇ ಚ ಪುನರಪಿ**

***ಸಂಸ್ಕೃತವು ಯಾವಾಗಲೂ ಮನೆ ಮನೆಗಳಲ್ಲಿ ಮತ್ತೆ ಬೆಳಗಲಿ ।***

ಕರ್ನಾಟಕ ಸರ್ಕಾರದ ಬಹುಯತ್ನದ ಫಲವಾಗಿ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಗೊಂಡಿದೆ. ಕರ್ನಾಟಕಕ್ಕೂ ಸಂಸ್ಕೃತಕ್ಕೂ ಅವಿನಾಭಾವ ಸಂಬಂಧ ಉಂಟು. ಮೈಸೂರು ಅರಸರ ಆಳ್ವಿಕೆಯ ಕಾಲದಿಂದಲೂ ಸಂಸ್ಕೃತಕ್ಕೆ ಸಿಕ್ಕ ಪ್ರೋತ್ಸಾಹವನ್ನು ನಾವು ಮರೆಯುವ ಹಾಗಿಲ್ಲ. ಕರ್ನಾಟಕದ ಸಾಂಸ್ಕೃತಿಕ ರಾಜಧಾನಿಗಳಾದ ಬೆಂಗಳೂರು, ಶಿವಮೊಗ್ಗ, ಬಳ್ಳಾರಿ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮಂಗಳೂರು, ಉಡುಪಿ ಮುಂತಾದ ಸ್ಥಳಗಳಲ್ಲಿ ವಿಖ್ಯಾತರಾದ ಸಂಸ್ಕೃತ ವಿದ್ವಾಂಸರು ಇದ್ದರೆಂಬುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಅವರು ರಚಿಸಿರುವ ಸಂಸ್ಕೃತ–ಕನ್ನಡ ಗ್ರಂಥಗಳು ನಮ್ಮ ಸಾಹಿತ್ಯಕ ಸಂಪತ್ತನ್ನು ಹೆಚ್ಚಿಸಿವೆ. ಸಂಸ್ಕೃತ ವಿಶ್ವವಿದ್ಯಾಲಯದ ಮೂಲಕ ಭಾಷಾ ಸಂಶೋಧನೆ, ಸಾಹಿತ್ಯ ಸಂಶೋಧನೆ, ಶಾಸ್ತ್ರ ಸಂಶೋಧನೆ ಹಾಗೂ ವಿಜ್ಞಾನಕ್ಕೆ ಸಂಬಂಧಿತ ಸಂಶೋಧನೆಗಳು ಸದಾ ನಡೆಯುತ್ತಿರಲೆಂಬುದು ನಮ್ಮ ಆಶಯ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರಧಾನವಾಗಿ ನಾಲ್ಕು ನೆಲೆಗಳನ್ನು ಹೊಂದಿದೆ. ಬೋಧನಾಂಗ, ಸಂಶೋಧನಾಂಗ, ಪ್ರಕಟಣಾಂಗ ಹಾಗೂ ಆಡಳಿತಾಂಗಗಳ ಮೂಲಕ ವಿಶ್ವವಿದ್ಯಾಲಯದ ಕ್ರಿಯಾಶಕ್ತಿಯನ್ನು ಉನ್ನತೀಕರಿಸಬೇಕಾಗಿದೆ. ಈ ಮೂಲಕ ಕರ್ನಾಟಕದ ಸಂಸ್ಕೃತ ಸಂಬಂಧೀ ಚಟುವಟಿಕೆಗಳಿಗೆ ಚಾಲನೆಯನ್ನು ನೀಡುವುದು ನಮ್ಮ ಉದ್ದೇಶವಾಗಿದೆ. ನಾವು ಪಶ್ಚಿಮದ ಜ್ಞಾನದ ಹಿನ್ನೆಲೆಯಲ್ಲಿ ಭಾರತೀಯ ಸಂಶೋಧನೆಯ ನೆಲೆಗಳನ್ನು ಗುರುತಿಸಲು ಯತ್ನಿಸುತ್ತಿದ್ದೇವೆ. ಆದರೆ, ಇದು ಅರ್ಧಜ್ಞಾನದ ಫಲವಾಗಿದೆ. ಸಂಶೋಧನೆಯು ನಮ್ಮ ಅರಿವಿನ ಫಲವಾಗಬೇಕು. ಹೀಗೆ ಆಗುವುದೇ ನಮ್ಮತನಕ್ಕೆ ಸಲ್ಲುವ ಬೆಲೆಯಾಗಿದೆ.

ಬೋಧನೆ–ಸಂಶೋಧನೆ ಇವೆರಡೂ ವಿಶ್ವವಿದ್ಯಾಲಯದ ಗುರಿಯಾಗುವುದರ ಜೊತೆಗೆ ಪ್ರಾಚೀನ ಜ್ಞಾನದೊಡನೆ ಆಧುನಿಕ ಜ್ಞಾನವೂ ಸೇರಲೆಂಬುದು ನಮ್ಮ ಮುಖ್ಯ ಆಶಯವಷ್ಟೆ. ಇವೆರಡರ ಸಮ್ಮಿಳನದಲ್ಲಿ ಸಂಸ್ಕೃತವು ಅಭಿವರ್ಧಿತವಾಗಬೇಕು. ಆ ನಿಟ್ಟಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರತಿಬಿಂಬಿಸುವ ಈ ವಾರ್ತಾಪತ್ರವು ಹೊರಬರುತ್ತಿದೆ. ಕರ್ನಾಟಕದಲ್ಲಿರುವ ಸಂಸ್ಕೃತ ವಿದ್ವಾಂಸರು, ಸಂಸ್ಕೃತ ಶಿಕ್ಷಕರು ಹಾಗೂ ಸಂಸ್ಕೃತಾಭಿಮಾನಿಗಳು ವಿಶ್ವವಿದ್ಯಾಲಯದ ಮುನ್ನಡೆಯಲ್ಲಿ ನಮ್ಮೊಡನಿರಬೇಕೆಂಬುದು ನಮ್ಮ ಸದಾಶಯವಾಗಿದೆ. ಕನ್ನಡ ಮತ್ತು ಸಂಸ್ಕೃತ ಪರಸ್ಪರ ಸಹಭಾವದಲ್ಲಿ ಕಳೆದ ಒಂದೂವರೆ ಸಾವಿರ ವರ್ಷ ನಡೆದುಬಂದಿದೆ. ಅವುಗಳಿಗೆ ಪ್ರತ್ಯೇಕವಾದ ನೆಲೆಗಳಿರುವಂತೆ ಒಂದರೊಡನೊಂದು ಸೇರಿಕೊಂಡಿರುವ ನೆಲೆಗಳೂ ಉಂಟು. ಈ ಸಂಗತಿಯನ್ನು ನಾವು ಮರೆಯುವಂತಿಲ್ಲ. ಕನ್ನಡವು ಕನ್ನಡಿಯಾಗಬೇಕಾದರೆ ಸಂಸ್ಕೃತ ಜ್ಞಾನದ ನಿಜದ ನೆಲೆಗಳನ್ನು ಅರಿಯುವುದು ಅಗತ್ಯವಿದೆ. ಆ ದಿಕ್ಕಿನಲ್ಲಿ ಸಂಸ್ಕೃತ ವಿಶ್ವವಿದ್ಯಾಲಯವು ಬೋಧನೆ ಮತ್ತು ಸಂಶೋಧನೆಯ ಜೊತೆಗೆ ಪ್ರಕಟಣೆಗಳನ್ನು ತರುವುದರ ಕಡೆ ಗಮನಹರಿಸಿದೆ. ಈ ವಿಷಯದಲ್ಲಿ ಸಂಸ್ಕೃತ ಮಹಾಜನರ ನೆರವನ್ನು, ಸಲಹೆಯನ್ನು ಮತ್ತು ಉದಾರತೆಯನ್ನು ಕೋರುತ್ತೇನೆ. ನಿನ್ನೆಯ ತಿಳಿವು ಇಲ್ಲದೆ ವರ್ತಮಾನಕ್ಕೆ ಬೆಲೆಯಿಲ್ಲ. ಇಂದಿನ ತಿಳಿವಿಲ್ಲದೆ ನಾಳೆಯ ಮೌಲ್ಯಗಳಿಗೆ ಬೆಲೆಯಿಲ್ಲ. ಈ ಸಂಗತಿಯನ್ನು ನಾವು ತಿಳಿದು ಆ ಮೂಲಕ ಸಂಸ್ಕೃತವನ್ನು ನಿರ್ದಿಷ್ಟ ನೆಲೆಯಲ್ಲಿ ಮರುರೂಪಿಸಿಕೊಳ್ಳಬೇಕಾಗಿದೆ. ಈ ಮರುರೂಪಿಕೆಯ ಸಂಕೇತವಾಗಿ ಸಂಸ್ಕೃತ ವಿಶ್ವವಿದ್ಯಾಲಯವು ನಿಮ್ಮ ಮುಂದಿದೆ. ಅದರ ಆಶಯವನ್ನು ಬಿಂಬಿಸುವ ವಾರ್ತಾಪತ್ರವು ನಿಮ್ಮ ಕೈಯಲ್ಲಿದೆ. ಸಂಸ್ಕೃತದಲ್ಲಿರುವ ಒಂದು ಅಪರೂಪ ಮಾತಿನಿಂದ ವಿರಾಮ ಹೇಳಬಹುದು. ***'ಕಾರ್ಯಗಳು ಪ್ರಯತ್ನದಿಂದ ಕೈಗೂಡುತ್ತವೆಯೇ ಹೊರತು ಇಚ್ಛೆಯಿಂದಲ್ಲ'.*** ಈ ಮಾತನ್ನು ನಾವು ಆಗುಗೊಳಿಸಬೇಕಾಗಿದೆ.

**ಉದ್ಯಮೇನ ಹಿ ಸಿದ್ಧ್ಯಂತಿ ಕಾರ್ಯಾಣಿ ನ ಮನೋರಥೈಃ ।**

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಕುಲಪತಿಗಳು**

## कुलपतीनां वचः



**प्रो. मल्लेपुरं जि. वेङ्कटेशः**

कर्णाटकसंस्कृतविश्वविद्यालयेन संस्कृत–त्रैमासिकवार्तापत्रं प्रकाश्यते । यद्यपि इदं वार्तापत्रं संस्कृतविश्वविद्यालयस्य कार्यक्रमाणां निमित्तम् एव समारब्धं, तथापि संस्कृतसम्बद्धाः सर्वे कार्यक्रमाः अत्र समाविष्टाः भवेयुः इति मम आशयः । संस्कृतं सर्वेषां भाषा । इयं कर्णाटकस्य सर्वसंस्थानां, पाठशालानाम्, अध्यापकानां, विदुषां छात्राणां च सम्बद्धा इति भावः सर्वेषु उत्पद्येत । कन्नडभाषा संस्कृतभाषा च न कदापि भाषाविरोधिन्यौ, अपि तु सहैव जीवितुं शक्नुतः इति अस्माभिः प्रमाणयितव्यम् अस्ति। संस्कृतं सामरस्यं जनयति, तद्वारा संस्कृतिं प्रकर्षयति च । मानवस्य सात्त्विकगुणम् अपि वर्धयति इयम् । एतस्याः पोषकरूपेण वार्तापत्रं प्रकाश्यमानम् अस्ति। अस्य वार्तापत्रस्य निर्माणे महता अभिमानेन परिश्रमं कृतवती सम्पादिका, सम्पादन–समितिसदस्याः विद्वांसः च मया कृतज्ञतापूर्वकं स्मर्यन्ते । संस्कृतकन्नड–भाषाप्रेमिणः इदं वार्तापत्रं स्वागतीकरिष्यन्ति इति आशासे ।

## सम्पादकीयम्



**डा ॥ नागरत्ना हेगडे**

**आत्मीयबन्धो,**

कर्णाटकसंस्कृतविश्वविद्यालयः बहुषु विरोधेषु सत्सु अपि समारब्धः इति तु अभिमानावहः विषयः । संस्कृतभाषा पूर्णकुम्भसदृशी । सम्पूर्णकुम्भो न करोति शब्दम् । इयं संस्कृतभाषा, विरोधिनां वचनं श्रुत्वापि सदा शान्ता स्मितवदना च तिष्ठति । एतदेव वैशिष्ट्यम् अस्याः भाषायाः । इयं भाषा न कञ्चित् द्वेष्टि, न वा उपेक्षते, अपि तु स्वसमीपे आगतान् सर्वान् अपि पावयति, मातृवात्सल्यं दर्शयति च । अस्याः सेवार्थं कर्णाटकसर्वकारेणापि प्रयत्नः विहितः इति तु अभिनन्दनीयः अंशः । अयं संस्कृतभाषया प्राप्तः विजयः । "यत्र धर्मः तत्र जयः" इति अनेन प्रमाणितम् अभवत् । विश्वविद्यालयस्य बहुषु कार्येषु अन्यतममिदं त्रैमासिकं वार्तापत्रम्। अयं विश्वविद्यालयः स्वस्य लक्ष्यं साधयन् राष्ट्रस्य आदर्शः भवेत् इति आशासे ।

उत्तरायणे समारब्धमिदं वार्तापत्रं सदा प्रगतिपथे एव विराजताम् ।

**यतो धर्मस्ततो जयः**



# शुभाशंसना

अस्मदीयकर्णाटकराज्ये नूतनतया संस्कृतविश्वविद्यालयस्य शुभोदयोऽभवदिति महान् हर्षः संस्कृतप्रणयिनाम् । इयं हि गीर्वाणवाणी न केवलं भारतवर्षस्य, अपि तु देशान्तरे विद्यमानानां ज्ञानपिपासूनां विदुषां जीवातुः । अत एव इयं संस्कृतवाणी देववाणीति प्रशंसिता पण्डितोत्तमैः । तत्रभवान् भगवान् भर्तृहरिः – अनादिनिधनं ब्रह्म शब्दतत्त्वं यदक्षरम् इति वाक्यपदीये इमामपूर्वगौरवेण प्रशशंस । संस्कृतभाषा दैवीवाक् इत्याह महाकविर्दण्डी ।

सत्स्वपि अन्येषु संस्कृतविश्वविद्यालयेषु अस्मदीयेनानेन किञ्चिद्वैशिष्ट्यं दर्शनीयमपेक्षितम् । तच्च दर्शयितुं मेधाविना कुलपतिना भाव्यम् । अद्य नियुक्तः कुलपतिः डा ॥ मल्लेपुरं वेङ्कटेशमहोदयः अत्यन्तदक्षः कार्येषु, कुशलः संस्कृतसाहित्ये विराजमानं वैशिष्ट्यं समर्थरीत्या दर्शयितुम् । अस्य कुलपतिमहोदयस्य मार्गदर्शने विश्वविद्यालयोऽयं भारतीयसंस्कृतिं विख्यापयन् विभिन्नशास्त्रेषु पण्डितोत्तमैः अध्यापनं संशोधनञ्च कारयन् चिरकालं विराजतामित्याशास्महे ।

**महामहोपाध्यायः एन् रङ्गनाथशर्मा**
बेङ्गलूरु–८५



**प्रो. सि. जि. पुरुषोत्तमः**
विश्रान्तसंस्कृतप्राध्यापकः
विश्रान्तप्राचार्यः, महाराज कालेज्,
मैसूरु – ५

# सन्देशः

कर्णाटकसर्वकारेण संस्कृतभाषायाः विशेषाध्ययन–संशोधनादिनिमित्तम् एव संस्कृतविश्वविद्यालयः संस्थापितः इति तु आदर्शविषयः । सम्प्रति अयं विश्वविद्यालयः त्रैमासिकसंस्कृतवार्तापत्रं प्रकाशयति इति विषयं श्रुत्वा मे महान् प्रमोदः समजनि । संस्कृतभाषया अपरिमितज्ञानप्रदानेन मानवकुलं प्रति महत् योगदानं कृतं वर्तते इति बहवः भारतीयाः पूर्णतः न जानन्ति । एषु वर्षेषु एतद्विषये जनेषु जागरणं जायमानम् अस्ति यत् महतः अभिमानस्य विषयः अस्ति । कर्णाटकसंस्कृतविश्वविद्यालयेन इतरसंस्कृतसेवासंस्थाभिः च ये संस्कृतकार्यक्रमाः चाल्यन्ते, तेषां कार्यक्रमाणां मुखवाणीरूपं भवतु इदं त्रैमासिकवार्तापत्रम् । राज्ये प्रचलिष्यमाणान् संस्कृतकार्यक्रमान् न केवलं कर्णाटकराज्यीयाः, अपि तु इतरराज्यीयाः अपि जानन्तु । प्रभुः श्रीरामचन्द्रः इमां सारस्वतसेवाम् अनुगृह्णातु इति प्रार्थये ।

केरलापुरम्(अरकलगूडु – ता)
हासन जिल्ला

**सि.जि. पुरुषोत्तमः**

राष्ट्रपतिप्रशस्तिपुरस्कृतः दर्शनरत्नं मीमांसाभूषणम्
**प्रो. कृष्णमाचार्य तमणाचार्य पाण्डुरङ्गि**
बेङ्गलूरुविश्वविद्यानिलयस्य निवृत्तसंस्कृतप्राध्यापकः
पूर्णप्रज्ञविद्यापीठस्य उपकुलपतिः

**विद्याधीशनिलयः**
No. 132/4, III Block
जयनगरम्, बेङ्गलूरु – ५६००११
दूरवाणी – ०८०– २६६४८२१५



# सन्देशः

कर्णाटकसंस्कृतविश्वविद्यालयेन त्रैमासिकसंस्कृतवार्तापत्रिका प्रकाश्यत इति महान् मे प्रमोदः। कर्णाटके भारतस्य इतरेषु प्रदेशेषु अपि ये संस्कृतकार्यक्रमाः क्रियन्ते तेषां परस्परं परिचयः आवश्यकः। अस्यां पत्रिकायां एते विषयाः प्रकाशितास्स्युः इति विश्वसिमि। एषा पत्रिका वेब्सैट्द्वारा सर्वेभ्यः प्रदर्शनीया इति सूचयामि।

**प्रो. कृष्णमाचार्य तमणाचार्य पाण्डुरङ्गि**

# ಸಂಸ್ಕೃತ ವಿಶ್ವವಿದ್ಯಾಲಯದ ಭೂಮಿಕೆ

**'ಸಂಸ್ಕೃತ'**ವೆಂದೊಡನೆ ಕೆಲವು ಜನರ ಕಿವಿಗಳು ನಿಮಿರಿ ನಿಲ್ಲುತ್ತವೆ, ಇನ್ನು ಕೆಲವು ಜನರು ಮೂಗು ಮುರಿಯುತ್ತಾರೆ, ಮತ್ತೆ ಕೆಲವರು ಉದಾಸೀನರಾಗುತ್ತಾರೆ, ಹಲವರು ಹೌಹಾರುತ್ತಾರೆ. ಇನ್ನು ಕೆಲವರು ಹೆದರುತ್ತಾರೆ, ಮತ್ತೆ ಕೆಲವರು ನಮ್ಮ ಭಾಷೆಯೆಂದು ಅದನ್ನು ಆಲಂಗಿಸುತ್ತಾರೆ. ಅನೇಕರು ದೇವಭಾಷೆಯೆಂದೂ, ಪವಿತ್ರ ಭಾಷೆಯೆಂದೂ, ಹಿಂದೂ ಸಂಸ್ಕೃತಿಯನ್ನು ಪ್ರತಿನಿಧಿಸುವ ಭಾಷೆಯೆಂದೂ, ಜನಾಂಗೀಯ ಭಾಷೆಯೆಂದೂ ಅನೇಕ ಬಗೆಯಾಗಿ ಚಿಂತಿಸುವರು.

ಸಂಸ್ಕೃತ ಭಾಷೆಗೆ ಅಪಾರವಾದ, ಪ್ರಾಚೀನವಾದ ಪರಂಪರೆಯಿದೆ. ಒಂದು ಉತ್ತಮ ಭಾಷೆ ಹಾಗೂ ಸಾಹಿತ್ಯವನ್ನು ಹೊಂದಿದ ಶ್ರೀಮಂತ ಸಂಸ್ಕೃತಿಯ ಶ್ರೇಷ್ಠ ಭಾಷೆಯಾಗಿದೆ.

ಎಲ್ಲ ಅಡೆತಡೆಗಳ ಮಧ್ಯವೂ ಸಂಸ್ಕೃತ ಭಾಷೆಯು ತನ್ನ ಹಿರಿಮೆಯನ್ನು ಮೆರೆದಿದೆ. ಈ ಯುಗದಲ್ಲಿ ಎಲ್ಲ ಜಾತಿ, ಪಂಥ, ಪಂಗಡದವರಿಗೂ ಲಭಿಸುವ ಭಾಷೆಯಾಗಿದೆ. ಇದರ ಬಗ್ಗೆ ದಿನಪತ್ರಿಕೆಗಳಲ್ಲಿ ಬಹಳಷ್ಟು ಲೇಖನಗಳು ಪ್ರಕಟವಾಗಿವೆ. ಈ ಭಾಷೆ ಸತ್ತ ಭಾಷೆಯಲ್ಲ – ವೃದ್ಧಿಯ ಹಂತದಲ್ಲಿದ್ದು ಸಾರ್ವಜನಿಕರಿಗೆ–ಬಯಸಿದವರಿಗೆ ದೊರೆಯುವ ಭಾಷೆಯಾಗಿದೆ. ಮಿದುಳನ್ನು ತೀವ್ರಗೊಳಿಸುವುದಾಗಿದೆ (Brain Sharper). ಸಂಸ್ಕೃತದಲ್ಲಿ ಸಕಲ ವಿಷಯಗಳು ದೊರೆಯುವವುಗಳಾಗಿವೆ.

"ಸಂಸ್ಕೃತವು ರಾಷ್ಟ್ರದ ಆತ್ಮ" – ಸಂಸ್ಕೃತವು ಭಾರತದ ಆತ್ಮ. ಇದು ನಮ್ಮ ರಾಷ್ಟ್ರಭಾಷೆಯೂ ಹೌದು. ಭಾರತೀಯ ಸಂಸ್ಕೃತಿ ನಮಗೆ ಬೇಕಿದ್ದರೆ ನಾವು ಸಂಸ್ಕೃತವನ್ನು ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಲೇಬೇಕು ಎಂಬುದು ನ್ಯಾ. ರಾಮಾ ಜೋಯಿಸರ ಆಶಯ.

"ಸಂಸ್ಕೃತವು ಒಂದು ಜಾತಿ ಅಥವಾ ವರ್ಗಕ್ಕೆ ಸೀಮಿತವಾದ ಭಾಷೆ ಎಂಬ ಕಲ್ಪನೆಯಿಂದ ಜನ ಹೊರಬರಬೇಕು", "ಸಂಸ್ಕೃತದಲ್ಲಿ ಏನೂ ಇಲ್ಲ ಎಂದು ಬಹುತೇಕರು ನಂಬಿದ್ದಾರೆ. ಯಾಕೆಂದರೆ ಸಂಸ್ಕೃತದಲ್ಲಿ ಏನಿದೆ ಎಂದು ಇವರಿಗೆ ಗೊತ್ತಿಲ್ಲ. ಹೀಗಾಗಿಯೇ ಈ ಬಗ್ಗೆ ತಿಳಿವಳಿಕೆ ನೀಡಲು ಸಂಸ್ಕೃತ ವಿಶ್ವವಿದ್ಯಾಲಯವನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ" ಎಂದು ನಿವೃತ್ತ ನ್ಯಾಯಮೂರ್ತಿ ರಾಮಾ ಜೋಯಿಸರು ಹೇಳಿದ್ದನ್ನು ನೆನಪಿಸಿಕೊಳ್ಳಬೇಕು.

ಭಾರತದ ಸಂವಿಧಾನದಲ್ಲಿ ಭಾಷೆ ಕಲಿಯುವ ಸ್ವಾತಂತ್ರ್ಯ ಎಲ್ಲರಿಗೂ ಸಮಾನವಾದುದೆಂಬುದನ್ನು ಜನರು ಅರಿಯಬೇಕಾಗಿದೆ.

ಸಂಸ್ಕೃತ ವಿಶ್ವವಿದ್ಯಾಲಯದ ವಿಧೇಯಕ ಅಂಗೀಕಾರದ ಹಿನ್ನೆಲೆಯಲ್ಲಿ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಾತನಾಡುತ್ತಾ "ಉದಾತ್ತ, ಆದರ್ಶ ಚಿಂತನೆಗಳನ್ನು ಜಗತ್ತಿಗೆ ನೀಡಿದ ದೈವಿಕ ಭಾಷೆ ಸಂಸ್ಕೃತ. ಭಾಷೆಯಲ್ಲಿನ ಜ್ಞಾನಸಂಪತ್ತನ್ನು ಸಾಮಾನ್ಯ ಜನರಿಗೆ ತಲುಪಿಸುವುದು ಸಂಸ್ಕೃತ ವಿಶ್ವವಿದ್ಯಾಲಯದ ಗುರಿ. ಸಂಸ್ಕೃತ ನಮ್ಮ ಭಾಷೆಗಳ ಮಾತೃಭಾಷೆ. ಇದನ್ನು ಮುಂದಿನ ಪೀಳಿಗೆಗೆ ಮುಟ್ಟಿಸಬೇಕು" ಎಂದು ಹೇಳಿದ್ದನ್ನು ಜ್ಞಾಪಿಸಿಕೊಳ್ಳಬಹುದಾಗಿದೆ.

"ಸಂಸ್ಕೃತವನ್ನು ಅಧ್ಯಯನ ಮಾಡಿದವರಿಗೆ ಅದರ ಮಹತ್ವ ತಿಳಿಯುತ್ತದೆ ಹಾಗೂ ಮನುಷ್ಯರ ಸ್ವಭಾವದಲ್ಲಿ ಬದಲಾವಣೆ ತರಲು ಸಂಸ್ಕೃತ ವಿಶ್ವವಿದ್ಯಾಲಯ ಅಗತ್ಯ" ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಶ್ರೀ ಡಿ.ಕೆ. ಶಿವಕುಮಾರ್ ಹೇಳಿದ್ದನ್ನೂ ಜ್ಞಾಪಿಸಿಕೊಳ್ಳಬಹುದಾಗಿದೆ.

"ಸಂಸ್ಕೃತವೆಂಬುದು ಜ್ಞಾನಭಂಡಾರ ಇದ್ದಂತೆ. ಆದರೆ ಇದರ ಕೀಲಿಕೈ ಕಳೆದುಹೋಗಿದೆ. ಎಂದೇ ಈ ಕೀಲಿಕೈ ಹುಡುಕುವ ಪ್ರಯತ್ನವಾಗಿ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುತ್ತಿದೆ" ಎಂದು ಸಚಿವ ಡಾ. ವಿ.ಎಸ್. ಆಚಾರ್ಯರು ಹೇಳಿದ್ದಾರೆ.

"ಸಂಸ್ಕೃತ ಕೇವಲ ಒಂದು ವರ್ಗಕ್ಕೆ ಸೀಮಿತವಾಗ ಬಾರದು, ಇದು ಎಲ್ಲರಿಗೂ ಮುಟ್ಟುವಂತಾಗಬೇಕು. ಇದಕ್ಕೆ ಸಂಸ್ಕೃತ ವಿಶ್ವವಿದ್ಯಾಲಯ ಒತ್ತಾಸೆಯಾಗಿ ನಿಲ್ಲಲಿ" ಎಂದು ಸಭಾಪತಿ ಶ್ರೀ ವೀರಣ್ಣ ಮತ್ತೀಕಟ್ಟಿ ನುಡಿದಿದ್ದರು.

ಸಂಸ್ಕೃತ ಭಾಷೆಯ ಬಗ್ಗೆ ಹಾಗೂ ಅದರ ಬೋಧನೆ–ಪಠನಗಳನ್ನು ಕುರಿತಾಗಿ ದೇಶದ ಮೂಲೆ ಮೂಲೆಗಳಲ್ಲಿಯೂ ತಿಳಿವಳಿಕೆ ನೀಡಬೇಕಾಗಿದೆ.

ಸರ್ ಮಿರ್ಜಾ ಇಸ್ಮಾಯಿಲ್, ಫಖರುದ್ದೀನ್ ಅಲಿ ಅಹಮ್ಮದ, ಡಾ. ರಾಜಾರಾಮಣ್ಣ, ಮಹರ್ಷಿ ದಯಾನಂದ ಸರಸ್ವತಿ, ಡಾ. ಎಸ್. ರಾಧಾಕೃಷ್ಣನ್, ಕೆ.ಆರ್. ನಾರಾಯಣನ್, ಜವಾಹರಲಾಲ ನೆಹರೂ, ಮಹಾತ್ಮ ಗಾಂಧೀ, ಶ್ರೀ ಅರವಿಂದ, ಪ್ರೊ. ಮೆಕಡೊನೆಲ್, ಸರ್ ವಿಲಿಯಂ ಜೋನ್ಸ್, ಮ್ಯಾಕ್ಸ ಮ್ಯೂಲರ್, ವಿಲ್ ಡ್ಯುರಾಂಟ್, ಆಲ್ಬರ್ಟ ಐನ್‌ಸ್ಟೀನ್, ಮಾರ್ಕಟ್ವೇನ್ ಮುಂತಾದ ಮಹನೀಯರು ಸಂಸ್ಕೃತದ ಒಟ್ಟಾರೆಯಾದ ಮಹತ್ವದ ಬಗ್ಗೆ ಅಭಿಪ್ರಾಯಗಳನ್ನು ನೀಡಿದ್ದಾರೆ. ಜನ್ಮದಿಂದ ಮರಣದವರೆಗೆ ನಡೆಯುವ ಕ್ರಿಯೆಗಳಿಗಾಗಿ ಸಂಸ್ಕೃತದಲ್ಲಿ ನಿಯಮಗಳಿವೆ. ಅವುಗಳನ್ನು ಪಾಲಿಸಲಾಗುತ್ತಿದೆ.

ಮಹಾತ್ಮ ಗಾಂಧೀಜಿಯ ನುಡಿ "ಸಂಸ್ಕೃತದ ಅಧ್ಯಯನ ಮಾಡದೇ ಯಾರೂ ನೈಜ ಭಾರತೀಯನಾಗಲಾರ ಅಥವಾ ನೈಜ ಪಂಡಿತನೂ ಆಗಲಾರ" ಎಂಬುದು ಅರಿಯುವ ಮಾತಾಗಿದೆ.

ಕರ್ನಾಟಕ ಸರಕಾರವು ಪ್ರಥಮಾ, ಕಾವ್ಯ, ಸಾಹಿತ್ಯ ಮತ್ತು ವಿದ್ವತ್ ತರಗತಿಗಳನ್ನು ನಡೆಸುತ್ತಿದ್ದು, ರಾಜ್ಯದ ಸಂಸ್ಕೃತ ಕಾಲೇಜುಗಳನ್ನು ಒಂದೇ ಸೂರಿನಡಿಯಲ್ಲಿ ತಂದು ಅಧ್ಯಯನದ ಒಂದು ಸಮತೆಯನ್ನು ಕಾಯ್ದುಕೊಳ್ಳಲು ಹಾಗೂ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಹೆಚ್ಚಿನ ವ್ಯಾಸಂಗಾವಕಾಶಗಳು ದೊರೆಯಲಿ, ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಸ್ಕೃತದ ಕಲಿಕೆಯ ಮೂಲಕ ಸಂವಾದಕ್ಕಾಗಿ ಒಂದು ಉನ್ನತ ಸಂಸ್ಥೆಯು ಅಸ್ತಿತ್ವಕ್ಕೆ ಬರಲೆಂಬ ಮಹದಾಶಯದಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010ರಲ್ಲಿ ಅಸ್ತಿತ್ವಕ್ಕೆ ಬಂದಿದೆ.

"ಬಹು ಪ್ರಾಚೀನವಾದ ಮತ್ತು ಉಜ್ವಲವಾದ ವೈಜ್ಞಾನಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಂಪ್ರದಾಯ ಮತ್ತು ಪರಂಪರೆಗಳನ್ನುಳ್ಳ ಹಾಗೂ ಗದ್ಯ, ಪದ್ಯ, ನಾಟಕ, ನಾಟ್ಯ, ಶಿಲ್ಪ, ಕಲೆ, ವರ್ಣಚಿತ್ರ, ಲಲಿತಕಲೆಗಳು, ವೈದ್ಯಶಾಸ್ತ್ರ, ತತ್ತ್ವಜ್ಞಾನ ಕ್ಷೇತ್ರಗಳಲ್ಲಿ ಮತ್ತು ಇತರ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಭಾರತೀಯ ವಿದ್ವಾಂಸರು ಈವರೆವಿಗೂ ಸಾಧಿಸಿರುವ ಸಾಧನೆಗಿಂತಲೂ ವ್ಯಾಪಕವಾದ ಮತ್ತು ಚಿರಂತನವಾದ ಕೊಡುಗೆಯನ್ನು ನೀಡಿರುವಂಥ ಸಂಸ್ಕೃತ ಭಾಷೆಯ ಅನನ್ಯ ಅಭಿವೃದ್ಧಿಗಾಗಿಯೆಂದೇ ಪ್ರತ್ಯೇಕವಾದ ಒಂದು ವಿಶ್ವವಿದ್ಯಾಲಯುವನ್ನು ರಚಿಸುವುದು ಯುಕ್ತವಾಗಿರುವುದರಿಂದ ಮತ್ತು ಸಂಸ್ಕೃತ ಭಾಷೆಯ ವ್ಯಾಸಂಗ ಹಾಗೂ ಸಂಶೋಧನೆಯ ಅಭ್ಯುದಯ ಮತ್ತು ಪುರೋಭಿವೃದ್ಧಿಗಾಗಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಅಪೇಕ್ಷಣೀಯ ವಾದುದರಿಂದ ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳನ್ನು ಹೊಂದಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮವನ್ನು 2009ರಂದು ಹೊರಡಿಸಲಾಗಿದ್ದು, ದಿನಾಂಕ 2010ರ ಏಪ್ರಿಲ್ 7ರಂದು ರಾಜ್ಯಪಾಲರ ಅನುಮೋದನೆಯನ್ನು ಪಡೆದ ಹಿನ್ನೆಲೆಯಲ್ಲಿ ಏಪ್ರಿಲ್ 9, 2010ರಂದು ಕರ್ನಾಟಕ ರಾಜ್ಯಪತ್ರವನ್ನು ಅಧಿಕೃತವಾಗಿ ಪ್ರಕಟಿಸಲಾಗಿದೆ.

■ **ಡಾ. ಚಂದ್ರಮೌಳಿ ಎಸ್. ನಾಯ್ಕರ**
**ಕುಲಸಚಿವರು**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

## ಕರ್ನಾಟಕ ರಾಜ್ಯದಲ್ಲಿರುವ ಸಂಸ್ಕೃತ ಮಹಾವಿದ್ಯಾಲಯಗಳು

**ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು**
ನ್ಯೂ ಸಯ್ಯೋಜಿ ರಾವ್ ರಸ್ತೆ,
ಮೈಸೂರು.

**ಶ್ರೀ ಚಾಮರಾಜೇಂದ್ರ ಸರ್ಕಾರಿ ಸಂಸ್ಕೃತ ಕಾಲೇಜು**
ಪಂಪಮಹಾಕವಿ ರಸ್ತೆ,
ಚಾಮರಾಜಪೇಟೆ, ಬೆಂಗಳೂರು.

**ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು**
ಸಿದ್ಧಗಂಗಾ, ತುಮಕೂರು ಜಿಲ್ಲೆ

**ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜು**
ಪೂರ್ಣಪ್ರಜ್ಞ ನಗರ,
ಕತ್ತರಗುಪ್ಪೆ ಮುಖ್ಯರಸ್ತೆ
ಬೆಂಗಳೂರು.

**ಶ್ರೀ ರಾಜರಾಜೇಶ್ವರಿ ಸಂಸ್ಕೃತ ಕಾಲೇಜು**
ಸೋಂದಾ ಸ್ವರ್ಣವಲ್ಲಿ ಮಠ, ಅಂಚೆ
ಮಠದೇವಳ, ಶಿರಸಿ ತಾ॥, ಉ.ಕ. ಜಿಲ್ಲೆ

**ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು**
ಆದಿಚುಂಚನಗಿರಿ ಕ್ಷೇತ್ರ,
ನಾಗಮಂಗಲ ತಾಲ್ಲೂಕು,
ಮಂಡ್ಯ ಜಿಲ್ಲೆ.

**ಶ್ರೀ ಮಾತಾ ಸಂಸ್ಕೃತ ಕಾಲೇಜು**
ಉಮ್ಮಚಗಿ, ಯಲ್ಲಾಪುರ, ಉತ್ತರ ಕನ್ನಡ

**ರಾಘವೇಂದ್ರ ಭಾರತಿ ಸವೇದ ಸಂಸ್ಕೃತ ಕಾಲೇಜು**
ಸುಬ್ರಹ್ಮಣ್ಯ, ಸುರಕಟ್ಟೆ,
ಹೊನ್ನಾವರ, ಉ.ಕ. ಜಿಲ್ಲೆ

**ಸಿ.ಎಲ್.ವೈ. ಸಂಸ್ಕೃತ ಕಾಲೇಜು**
ಕುಮಾರೇಶ್ವರ ನಗರ,
ಬೆಳಗಾವಿ ರಸ್ತೆ, ಧಾರವಾಡ.

**ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು**
ಜಮಖಂಡಿ, ಜಿಲ್ಲೆ-ಬಾಗಲಕೋಟೆ

**ಶ್ರೀ ಮಲೆಮಹದೇಶ್ವರ ಸಂಸ್ಕೃತ ಕಾಲೇಜು**
ಕೊಳ್ಳೇಗಾಲ ತಾಲ್ಲೂಕು,
ಚಾಮರಾಜನಗರ ಜಿಲ್ಲೆ

**ಶ್ರೀ ಗಜಾನನ ಸಂಸ್ಕೃತ ಕಾಲೇಜು**
ಸೂಡಿ, ರೋಣ ತಾಲ್ಲೂಕು,
ಗದಗ ಜಿಲ್ಲೆ

**ಶ್ರೀ ಮೇಧಾ ದಕ್ಷಿಣಮೂರ್ತಿ ವೇದ ಭವನ, ಸಂಸ್ಕೃತ ಮಹಾ ವಿದ್ಯಾಲಯ**
ಗೋಕರ್ಣ, ಕುಮಟಾ ತಾಲ್ಲೂಕು,
ಉತ್ತರ ಕನ್ನಡ ಜಿಲ್ಲೆ

**ಸರ್ಕಾರಿ ಸಂಸ್ಕೃತ ಕಾಲೇಜು**
ಮೇಲುಕೋಟೆ - 571 431
ಮಂಡ್ಯ ಜಿಲ್ಲೆ

**ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು**
ಉಡುಪಿ - 576 101

# ಸಂಸ್ಕೃತ ವಿಶ್ವವಿದ್ಯಾಲಯದ ಶುಭಾರಂಭಕ್ಕೆ ಹಿರಿಯರ ಹಾರೈಕೆ

ಭಾರತದಲ್ಲಿ ಒಟ್ಟು ಹನ್ನೆರಡು ಸಂಸ್ಕೃತ ವಿಶ್ವವಿದ್ಯಾಲಯಗಳಿವೆ. ಕೇರಳದಲ್ಲಿ ಸಂಸ್ಕೃತ ವಿದ್ವತ್ತಿನ ಗಟ್ಟಿ ಪರಂಪರೆ ಇದ್ದೂ, ಮಲಯಾಳಂ ಭಾಷೆಯಲ್ಲಿ ಕನ್ನಡಕ್ಕಿಂತ ಸಂಸ್ಕೃತ ಭಾಷೆಯ ಬಾಹುಳ್ಯ ಹೆಚ್ಚಾಗಿದ್ದೂ ಮಲಯಾಳಂ ಭಾಷೆಯು ಕನ್ನಡಕ್ಕಿಂತ ಹೆಚ್ಚು ಸ್ಪಷ್ಟವಾಗಿ ಬೆಳೆಯುತ್ತಿದೆ.

ಆಂಧ್ರದ ಇತರ ಎಲ್ಲ ಸಾಮಾನ್ಯ ವಿಶ್ವವಿದ್ಯಾಲಯಗಳಲ್ಲೂ ಸಂಸ್ಕೃತ ವಿಭಾಗಗಳಿದ್ದರೂ ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠವು ಅಷ್ಟೊಂದು ಉತ್ಕರ್ಷಗತಿಯಲ್ಲಿರುವುದು ಹೇಗೆ?

ಒರಿಸ್ಸಾ, ಬಿಹಾರ (ದರ್ಭಾಂಗ) ಕಾಶಿ, ಉಜ್ಜಯಿನಿ ಮೊದಲಾದ ಕಡೆಗಳಲ್ಲಿರುವ ಸಂಸ್ಕೃತ ವಿಶ್ವವಿದ್ಯಾಲಯಗಳು ಪರಸ್ಪರ ಕಾರ್ಯ ಸಮನ್ವಯದಿಂದ ಹಿಂದೀ ಭಾಷೆಯನ್ನು ಸಮೃದ್ಧಗೊಳಿಸುತ್ತಿವೆ.

ಎಲ್ಲ ಪಕ್ಷಗಳೂ ಸಂಸ್ಕೃತ ವಿಶ್ವವಿದ್ಯಾಲಯವನ್ನು ತಡವಿಲ್ಲದೆ ಆರಂಭಿಸುವುದೊಂದೇ ಬಾಕಿ ಇದೆ.

**ಡಾ. ಎಸ್.ಎಲ್. ಭೈರಪ್ಪ**

ಸಂಸ್ಕೃತ ತನ್ನ ಸ್ಥಾನದಲ್ಲಿ, ತನ್ನ ಪಾತ್ರತೆಯಲ್ಲಿ ಇನ್ನಾವ ಭಾಷೆಯ ಜತೆಗೂ ಸ್ಪರ್ಧೆಗೆ ನಿಂತಿಲ್ಲ. ಆಯಾ ಬೀಜಶಕ್ತಿಯಿಂದ ಆಯಾ ಗಿಡಮರಗಳು ಬೆಳೆಯುವಾಗ ಸೂರ್ಯಕಿರಣ ದ್ಯುತಿವಿಶ್ಲೇಷಣೆ ಉಂಟುಮಾಡಿ ಆಯಾ ಮರಬಳ್ಳಿಗಳು ಬೆಳೆಯುವುದಕ್ಕೆ ಪುಷ್ಟಿ ಕೊಡುವಂತೆ ಸಂಸ್ಕೃತ ವಿಶ್ವವಾಙ್ಮಯಕ್ಕೆ ಶಕ್ತಿ ನೀಡುತ್ತಾ ಬಂದಿದೆ. ಆದ್ದರಿಂದ ಕರ್ನಾಟಕದಲ್ಲಿ ಸಂಸ್ಕೃತದ ವಿವಿ ಸ್ಥಾಪನೆಯಿಂದ ಕನ್ನಡಕ್ಕೆ ಹಾನಿ ಎಂಬ ವಿಚಾರ ತಲೆಯಲ್ಲಿ ಹೇಗೆ ಹುಟ್ಟಿತು?

**ರಾಮಚಂದ್ರಭಟ್, ಕೋಟೆಮನೆ**

ಹಿರಿಯಣ್ಣ, ಶ್ಯಾಮಶಾಸ್ತ್ರಿ, ಅಂಬಳೆ ವೆಂಕಟಸುಬ್ಬಯ್ಯ ನವರಂಥ ವಿದ್ವಾಂಸರು ಸಂಸ್ಕೃತ ವಿವಿಗಳ ಫಲವೇನಲ್ಲವೆಂದರೆ ಷೇಕ್ಸ್‌ಪಿಯರ್, ಕುಮಾರವ್ಯಾಸ, ಕಾಳಿದಾಸನಂಥವರೂ ಅಕಾಡೆಮಿ, ಸಾಮಾನ್ಯ ವಿಶ್ವವಿದ್ಯಾಲಯಗಳ ಫಲವಲ್ಲವೆಂದು ವಾದಿಸಿ ಆ ಸಂಸ್ಥೆಗಳನ್ನೂ ಗುಡಿಸಿಹಾಕಬಹುದಲ್ಲ? ಹಿಂದೆ ನಮ್ಮ ಹಳ್ಳಿಯ ಹೆಣ್ಣುಮಕ್ಕಳು ಮನೆಯಲ್ಲಿಯೇ ಹಾಯಾಗಿ ಹೆರುತ್ತಿದ್ದರು; ಇಂದು ಹೆರಿಗೆ ಆಸ್ಪತ್ರೆಗಳೇಕೆ ಎಂದು ಹೇಳಬಹುದೇ? ಸಂಸ್ಕೃತ ವಿವಿಯೋ, ಮತ್ತೊಂದೋ ವ್ಯಾಪಕ–ಸಾರ್ವಭೌಮ ವ್ಯವಸ್ಥೆಯು ನಮ್ಮ ನಾಡಿನ ಸಂಸ್ಕೃತ ಶಿಕ್ಷಣ ವಲಯಕ್ಕೆ ಬೇಕಿದೆ. ಅದು ಹೇಗಿರಬೇಕೆಂಬ ಚರ್ಚೆಗೆ ಅರ್ಥವುಂಟೇ ಹೊರತು ಅದೇ ಬೇಡ, ಸಂಸ್ಕೃತವೇ ಬೇಡ ಎನ್ನುವುದು ಆಗ್ರಹವಲ್ಲದೆ ಮತ್ತೇನು? ನಮಗಿಂಥದ್ದು ಬೇಕು ಎನ್ನುವುದು ಹಕ್ಕಾದೀತು. ಅಲ್ಲಿ ಎಷ್ಟೋ ಬಾರಿ ನ್ಯಾಯವೂ ಇದ್ದೀತು. ಆದರೆ ಅವರಿಗೆ ಇಂಥದ್ದನ್ನು ಕೊಡಬೇಡಿ–ಅಷ್ಟೇಕೆ, ಏನನ್ನೂ ಕೊಡಬೇಡಿ ಎನ್ನುವುದು ಎಂಥ ವರ್ತನೆ?

ಸಂಸ್ಕೃತದ ಸರ್ವಾಂಗೀಣ ಅಭ್ಯುದಯಕ್ಕೆ ಯಾವುದು ಕಾರಣವಾಗುವುದಿದ್ದರೂ ಅದು ನಮ್ಮೆಲ್ಲರಿಗೆ ಒಪ್ಪಿಗೆಯಾಗಬೇಕು. ಇದು ಯಾವ ರೀತಿಯಲ್ಲಿಯೂ ಯಾವ ದೇಶಭಾಷೆಗಳಿಗೂ ಧಕ್ಕೆಯಾಗದು. ಹೆಚ್ಚೇನು, ಶ್ರೇಯಸ್ಸೇ, ಆದೀತು. ಈ ಸಂದರ್ಭದಲ್ಲಿ ಮಹಾತ್ಮ ಗಾಂಧಿಯವರ ಮಾತೊಂದು ನೆನಪಾಗುತ್ತದೆ. ಅದರ ಅಭಿಪ್ರಾಯ ಹೀಗೆ: ಕರ್ನಾಟಕವು ಕನ್ನಡಿಗರಿಗೆ, ತಮಿಳುನಾಡು ತಮಿಳರಿಗೆ, ಬಂಗಾಳವು ಬಂಗಾಳಿಗಳಿಗೆ ಈ ರೀತಿ ಆಯಾ ರಾಜ್ಯಗಳು ಅಲ್ಲಲ್ಲಿಯ ಜನರಿಗೆ ಸೇರಿದ್ದಾದರೆ ಭಾರತವು ಯಾರಿಗೆ ಸೇರಬೇಕು? ಇದನ್ನೇ ಸಂಸ್ಕೃತಕ್ಕೂ ಅನ್ವಯಿಸುವುದರಲ್ಲಿ ಹೆಚ್ಚಿನ ಔಚಿತ್ಯವಿದೆ. ಆಯಾ ದೇಶಭಾಷೆಗಳು ಆಯಾ ಜನರಿಗೆ ಸೇರಿದ್ದಾದಲ್ಲಿ ಯಾವ ನಿರ್ದಿಷ್ಟ ಪ್ರಾಂತಕ್ಕೂ ಎಂದೂ ಸೇರಿಲ್ಲದ ಸಂಸ್ಕೃತವು ಯಾರಿಗೆ ಸಲ್ಲಬೇಕು? ಈ ಪ್ರಶ್ನೆಗೆ ನಮ್ಮ ನಮ್ಮ ಋಷಿ ಋಣಪ್ರಜ್ಞೆಯೇ ಉತ್ತರ ನೀಡಬೇಕು.

**ಶತಾವಧಾನಿ ಆರ್. ಗಣೇಶ್**

ಭಾಷಾಶಾಸ್ತ್ರದ ದೃಷ್ಟಿಯಿಂದ ತೌಲನಿಕ ಅಧ್ಯಯನ, ಸಂಸ್ಕೃತದಲ್ಲಿ ಹುದುಗಿರುವ ವೈಜ್ಞಾನಿಕ ಅಂಶಗಳ ಅಧ್ಯಯನ, ಬೇರೆ ಬೇರೆ ವಿಜ್ಞಾನಗಳ ಶಾಖೆಗಳನ್ನು ಓದುತ್ತಿರುವವರಿಗೆ ಪೂರಕವಾಗಿ ಹಲವು ಡಿಪ್ಲೊಮಾದಂಥ ಹತ್ತು ಹಲವು ಅಧ್ಯಯನ ಶಾಖೆಗಳತ್ತ ಇಂದು ಗಮನ ಹರಿಸಬೇಕಾಗಿದೆ. ಭೌತಶಾಸ್ತ್ರ, ಗಣಿತ ಮುಂತಾದ ಆಧುನಿಕ ಜ್ಞಾನಶಾಖೆಗಳನ್ನು ಓದುತ್ತಿರುವವರಿಗೆ ಈ ವಿಷಯದ ಕುರಿತು ನಮ್ಮ ಭಾರತೀಯ ಚಿಂತನೆ ಏನಿದೆಯೆಂಬ ಅರಿವಿಲ್ಲ. ಅಂತಹ ಅರಿವನ್ನು ನೀಡುವ ವ್ಯವಸ್ಥೆ ಇಂದಿಲ್ಲ. ನಮ್ಮಲ್ಲಿರುವ ಜ್ಞಾನರಾಶಿಯ ಬಗೆಗೆ ನಮಗೇ ಅರಿವಿಲ್ಲ.

ಹಲವರನ್ನು ಕಾಡುವ ಇನ್ನೊಂದು ಪ್ರಶ್ನೆ – ಸಂಸ್ಕೃತ ವಿಶ್ವವಿದ್ಯಾಲಯ ಕರ್ನಾಟಕಕ್ಕೆ ಬೇಕೇ ಎಂದು. ಭಾಷಾವಾರು

ಪ್ರಾಂತ್ಯಗಳ ರಚನೆಯಾದ ನಂತರ ಕರ್ನಾಟಕಕ್ಕೊಂದು ನೆಲೆ ಸಿಕ್ಕಿತು. ಸಂಸ್ಕೃತ ದೇಶದಲ್ಲೆಲ್ಲ ಪಸರಿಸಿದ್ದರಿಂದ ಅದಕ್ಕೊಂದು ಪ್ರತ್ಯೇಕ ನೆಲೆ ಸಿಗಲಿಲ್ಲ. ಸಂಸ್ಕೃತ ಅಂತಹ ಅಪೇಕ್ಷೆಯನ್ನೇನೂ ಹೊತ್ತುಕೊಂಡಿರಲಿಲ್ಲ. ಬೇರೆ ಭಾಷೆಗಳೊಂದಿಗೆ ಪೂರಕವಾಗಿಯೇ ಇರಬೇಕೆಂಬುದು ಅದರ ಅನೂಚಾನವಾದ ನಿಲುವು. ಅದರಿಂದಾಗಿಯೇ ಅದು ಸಹಬಾಳ್ವೆಯನ್ನೇ ಒಪ್ಪಿಕೊಂಡು ಬಾಳುತ್ತಿದೆ. ಎಲ್ಲ ರಾಜ್ಯಗಳ ಪ್ರೋತ್ಸಾಹದಿಂದ ಬಾಳಬೇಕಾದ ಭಾಷೆಯಿದು. ಈ ಹಿನ್ನೆಲೆಯಲ್ಲಿ ಸಂಸ್ಕೃತದ ವಿಕಾಸಕ್ಕೆ ಕರ್ನಾಟಕದ್ದೂ ಹೊಣೆಯಿದ್ದೇ ಇದೆ. ಈವರೆಗೆ ಆ ಹೊಣೆಯನ್ನು ನಮ್ಮ ರಾಜ್ಯ ನಿರ್ವಹಿಸಿಯೂ ಇದೆ. ಸಂಸ್ಕೃತದ ಬೆಳವಣಿಗೆ ಕನ್ನಡಕ್ಕೆ ಪೂರಕವಾಗಿಯೇ ಇರುತ್ತದೆ. ಅದು ಬೆಳೆದಲ್ಲಿ ಅದರ ಫಲವುಣ್ಣುವವರೂ ನಾವೇ.

ವಿರೋಧಕ್ಕಾಗಿಯೇ ವಿರೋಧ ಒಳ್ಳೆಯ ಲಕ್ಷಣವಲ್ಲ.

**ಜನಾರ್ದನ ಹೆಗಡೆ**

ವಿರೋಧ ಮಾಡುವವರು, ನಿಂದಕರು ಎಲ್ಲಾ ಕಾಲದಲ್ಲಿಯೂ ಇದ್ದರು; ಈಗಲೂ ಇದ್ದಾರೆ. ಎಷ್ಟೇ ವಿರೋಧವಿದ್ದರೂ ಸಂಸ್ಕೃತ ವಿವಿ ಸ್ಥಾಪನೆಯ ಬಗ್ಗೆ ಸರಕಾರ ತೆಗೆದುಕೊಂಡ ನಿರ್ಧಾರದಿಂದ ಹಿಂದೆ ಸರಿಯಬಾರದು. ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಲೇಬೇಕು.

**ಪ್ರೊ. ಟಿ. ಕೃಷ್ಣಭಟ್**

ಸರಕಾರವು ತಡವಾಗಿಯಾದರೂ ಸಾಧುವಾದ ನಿರ್ಣಯವನ್ನು ಕೈಗೊಂಡಿದೆ ಎನ್ನುವುದು ಸಂತಸದ ವಿಷಯವಾಗಿದೆ.

ಜ್ಞಾನಶೂನ್ಯವಾದ ಕ್ರಿಯೆ ಹಾಗೂ ಕ್ರಿಯಾಶೂನ್ಯವಾದ ಜ್ಞಾನ– ಇವೆರಡರಿಂದಲೂ ತಿಲಮಾತ್ರದಷ್ಟೂ ಪ್ರಯೋಜನವಿಲ್ಲ. ಸರಕಾರದ ಕ್ರಿಯೆಗಳು ಜ್ಞಾನಶೂನ್ಯವಾಗುವುದು ತಪ್ಪಿದರೆ, ಸಂಸ್ಕೃತಜ್ಞರ ಜ್ಞಾನವು ಕ್ರಿಯಾಶೂನ್ಯವಾಗುವುದು ತಪ್ಪುತ್ತದೆ ಎಂದಷ್ಟೇ ಹೇಳಬಹುದು.

**ಮಹೇಶ ಭಟ್ಟ ಆರ್. ಹಾರ್ಯಾಡಿ**

ಸಂಸ್ಕೃತದಂತೆ ಇತರ ಭಾಷೆಗಳಿಗೂ ತನ್ನದೇ ಆದ ಅಸ್ತಿತ್ವ ಇರುತ್ತದೆ. ಆದರೆ ಪ್ರೇರಣೆ, ಆಕರ ವಿಷಯಗಳು ಪ್ರಸ್ತಾಪಕ್ಕೆ ಬಂದಾಗಲಷ್ಟೆ ಸಹಿಷ್ಣುಭಾವದ ಕೊರತೆಯಿಂದ ವಿವಾದದ ಕಿಡಿ ಹೊಗೆಯಾಡುತ್ತದೆ. ಭಾಷೆಗೆ ಯಾವುದೇ ಹಂಗಿಲ್ಲ. ಅದು ನಿಂತ ನೀರಲ್ಲ. ಪಂಡಿತ ಪಾಮರರನ್ನೂ ಮೀರಿ ಸದಾ ಗುಪ್ತಗಾಮಿನಿಯಾಗಿ ಹರಿಯುತ್ತಲೇ ಇದೆ.

**ಎಂ. ಮಹ್ಮದ್ ಬಾಷಾ ಗೂಳ್ಯಂ**

ಲೋಕಾಭಿರಾಮವಾದ ಹರಟೆಯಲ್ಲಿ 'ನಾನು' ಎನ್ನುವುದು ಗೌಣ, 'ಅಲ್ಲಿ–ಇಲ್ಲಿ' ಎನ್ನುವುದು ಪ್ರಸ್ತಾವಿಕ. 'ಅವರು–ಇವರು' ಎನ್ನುವುದು ಅನಿವಾರ್ಯ (Name dropping) ಸರ್ವಥಾ ಅಲ್ಲ. ಸಂಸ್ಕೃತ ವಿಶ್ವವಿದ್ಯಾನಿಲಯವು ಆಗಲೇ ಬೇಕೆನ್ನುವುದು ಮುಖ್ಯ.

**ಎಸ್. ರಾಮಸ್ವಾಮಿ**

ಬೆಂಗಳೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಸಂಸ್ಕೃತ ವಿಶ್ವವಿದ್ಯಾಲಯ ರಾಷ್ಟ್ರಕ್ಕೆ ಮಾದರಿಯಾಗಿ ನಿಲ್ಲುವಂತೆ ಆಗಬೇಕು.

**ಪೇಜಾವರ ಮಠಾಧೀಶ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ**

ಸಂಸ್ಕೃತ ನಮ್ಮ ಭಾರತೀಯ ಸಂಸ್ಕೃತಿಗೆ ತಳಹದಿಯಾಗಿದೆ. ಹಲವು ಯುರೋಪಿಯನ್ ರಾಷ್ಟ್ರಗಳೂ ಸಂಸ್ಕೃತ ಅಧ್ಯಯನಕ್ಕೆ ಪ್ರೋತ್ಸಾಹ ನೀಡುತ್ತಿವೆ ಎಂಬುದನ್ನು ಎಲ್ಲಾ ಭಾರತೀಯ ವಿದ್ವನ್ಮಣಿಗಳು ಬಲ್ಲವರಾಗಿದ್ದಾರೆ. ತಿಳಿದವರು, ಮೇಧಾವಿಗಳು ಇಂಥ ಹೇಳಿಕೆ ನೀಡುವುದು ದುರದೃಷ್ಟಕರ.

**ದೀಕ್ಷಿತ ಯ.ಚಿ.**

ಯಾವ ಭಾಷೆ ಮತ್ತು ಗ್ರಂಥಗಳು ಶತಮಾನಗಳ ಕಾಲದಿಂದ ದಲಿತರ, ಸಾಮಾನ್ಯರ ಕೈಗೆ ಸಿಗದೆ ದೂರವಾಗಿದ್ದವೋ ಅವುಗಳನ್ನು ಮತ್ತೆ ಭಾರತದ ಬಹುದೊಡ್ಡ ಜನವರ್ಗಕ್ಕೆ ಸಿಗುವಂತೆ ಮಾಡುತ್ತಿರುವುದು ಅಂಬೇಡ್ಕರ್ ಅವರಿಗೆ ಅಂದೇ ದೊರೆತ ಅರಿವು ಇಂದಿನ ನಮ್ಮ ಪೀಳಿಗೆಗೆ ಸರಕಾರದ ಕೊಡುಗೆಯಾಗಿ ದೊರಕುತ್ತಿದೆ.

**ಡಾ. ಬಿ.ವಿ. ವಸಂತ್ ಕುಮಾರ್**

ವಿಶ್ವವಿದ್ಯಾಲಯ ಸ್ಥಾಪನೆ ಎಂಬುದು ಜಾತಿ, ವರ್ಗ, ವರ್ಣಗಳಿಂದ ಅತೀತವಾಗಿರಬೇಕಾದರೂ ಅಣಕು ಜಾತ್ಯತೀತತೆಯ ತಾಂಡವ ನಡೆಯುತ್ತಿರುವ ಭಾರತದಲ್ಲಿ ಎಲ್ಲವನ್ನೂ ಜಾತಿ ವರ್ಗಗಳ ಹಿನ್ನೆಲೆಯಲ್ಲಿಯೇ ನೋಡಲಾಗುತ್ತಿರುವುದರಿಂದ, ಅಲ್ಲದೆ ಭಾರತೀಯ ಯಾವ ವಿಶ್ವವಿದ್ಯಾಲಯವೂ ಜಾಗತಿಕ ಮಟ್ಟದಲ್ಲಿ ಉನ್ನತ ಸ್ಥಾನದಲ್ಲಿ ನಿಲ್ಲದೇ ಇರುವುದರಿಂದ ವೇದ ವಿಶ್ವವಿದ್ಯಾಲಯವೂ ಅಂತಹ ಕಳಪೆ ವಿವಿಗಳ ಸಾಲಿನಲ್ಲಿ ನಿಂತುಬಿಟ್ಟರೆ ಇದರಿಂದ ಯಾರಿಗೂ ಪ್ರಯೋಜನವಿಲ್ಲ. ಅಕ್ಷರ ಕಲಿಕೆಯ ವ್ಯವಸ್ಥೆಯೇ ಇಲ್ಲದಿದ್ದ ಹನ್ನೆರಡನೆಯ ಶತಮಾನದಲ್ಲಿ ದಲಿತ ಶರಣ ಉರಿಲಿಂಗಪೆದ್ದಿ ವೇದವಿದರನ್ನೂ ಮೀರಿಸುವಂತೆ ವೇದವನ್ನೋದಿ ತನ್ನ ವಚನಗಳನ್ನು ರಚಿಸಿ ಅಚ್ಚರಿ ವ್ಯಕ್ತಪಡಿಸಿದ್ದಾನೆ. ವೇದ ವಿಶ್ವವಿದ್ಯಾಲಯ ಸ್ಥಾಪಿತವಾಗದೇ

ಇದ್ದರೆ ವೇದಾಧ್ಯಯನದ ಅವಕಾಶ ಇಂದಿನ ಆಸಕ್ತ ದಲಿತರಿಗೂ ತಪ್ಪಿಹೋಗುತ್ತದೆ. ಮಠಗಳಂತೆ ವೇದವಿಶ್ವವಿದ್ಯಾಲಯ ಖಾಸಗಿ ಸಂಸ್ಥೆ ಆಗಲಾರದು. ಮೀಸಲಿನಿಂದಾಗಿ ಎಲ್ಲ ಜಾತಿ, ವರ್ಗದವರಿಗೂ ಅಲ್ಲಿ ಓದುವ ಹಕ್ಕು ಇದ್ದೇ ಇರುತ್ತದೆ. ದಲಿತರು ಸಂಸ್ಕೃತ ವೇದ (ಅಂದರೆ ಪ್ರಾಚ್ಯ ಜ್ಞಾನ) ಕಲಿಕೆಗೆ ವಂಚಿತರಾಗಿಯೇ ಉಳಿಯಬೇಕೇ? ಕಾರಣ ವೇದ ವಿಶ್ವವಿದ್ಯಾಲಯ ಸ್ಥಾಪನೆಗೆ ದಲಿತರೇ ಹೆಚ್ಚು ಒತ್ತು ಕೊಡಬೇಕಾಗಿದೆ. ವಿದೇಶಗಳ ವಿವಿಗಳಲ್ಲಿ ಈಗಾಗಲೇ ವೇದಾಧ್ಯಯನಕ್ಕೆ ಅವಕಾಶವಿದೆ. ಅಮೆರಿಕದ ಮೆಕ್ಸಿಕೋ, ಕೊಲೆರ್‍ಯಾಡೊ, ವಾಷಿಂಗ್ಟನ್, ಉತ್ತ, ಆರಿಜೋನಾ ಈ ಐದು ರಾಜ್ಯಗಳ ಸೆನೆಟ್ ಸಭೆಗಳು ವೇದಘೋಷದ ಪ್ರಾರ್ಥನೆಯೊಂದಿಗೆ ಕಲಾಪಗಳನ್ನು ಆರಂಭಿಸುವಷ್ಟು ಮುಂದೆಹೋಗಿವೆ.

**ಡಾ. ಸಂಗಮೇಶ ಸವದತ್ತಿಮಠ**

ಪ್ರಾಚೀನ ಮಹರ್ಷಿಗಳು ಇಡೀ ಜಗತ್ತಿನ ಕಲ್ಯಾಣವನ್ನೇ ಬಯಸಿದ್ದಾರೆ. ಉದಾ: "ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ", "ಜ್ಞಾನವು ಎಲ್ಲ ದಿಕ್ಕುಗಳಿಂದ ಬರಲಿ" ಎಂಬುದು ಉಪನಿಷತ್‌ಗಳ ಆಶಯ. ಎರಡೇ ಚರಣಗಳ ಸುಭಾಷಿತಗಳು ಎಷ್ಟೊಂದು ಅರ್ಥ ಗರ್ಭಿತವಾಗಿವೆ ಎಂಬುದನ್ನು ಇವರು ಕಣ್ತೆರೆದು ನೋಡಲಿ, ಕಂಪ್ಯೂಟರ್‌ಗೆ ಸಹ ಇಂಗ್ಲಿಷ್‌ಗಿಂತ ಸಂಸ್ಕೃತ ಸೂಕ್ತ ಭಾಷೆ ಎಂಬುದನ್ನು ಅನೇಕರು ಹೇಳಿದ್ದಾರೆ. ಸಂಸ್ಕೃತದಿಂದಲೇ ಭಾರತೀಯ ಸಂಸ್ಕೃತಿಯು 5 ಸಾವಿರ ವರ್ಷಗಳಿಂದ ಮುನ್ನಡೆದು ಬಂದಿದೆ. ವಿವಿಧತೆಯಲ್ಲಿ ಏಕತೆಯನ್ನು ತಂದಿದ್ದೇ ಸಂಸ್ಕೃತ. "ಏಕಂ ಸತ್ ವಿಪ್ರಾಃ ಬಹುಧಾ ವದಂತಿ" ಎಂದು ಹೇಳಿದ್ದೇ ಸಂಸ್ಕೃತ. ಆದ್ದರಿಂದ ಟೀಕೆಗಾಗಿ ಟೀಕೆ ಮಾಡದೇ ಪೂರ್ವಾಗ್ರಹ ವಿಚಾರಗಳಿಂದ ಹೊರಬಂದು ಚಿಂತಿಸಬೇಕು.

ಶಿವಾಜಿಯನ್ನು ಕೇವಲ ಮಹಾರಾಷ್ಟ್ರಕ್ಕೆ ಸೀಮಿತ ಗೊಳಿಸುವುದು, ಕಿತ್ತೂರು ಚೆನ್ನಮ್ಮನನ್ನು ಕೇವಲ ಕರ್ನಾಟಕಕ್ಕೆ ಸೀಮಿತಗೊಳಿಸುವುದು ಎಷ್ಟು ಮೂರ್ಖತನವಾಗುವುದೋ, ಸಂಸ್ಕೃತವನ್ನು ಕೇವಲ ಬ್ರಾಹ್ಮಣರಿಗೆ ಸೀಮಿತಗೊಳಿಸುವುದೂ ಅಷ್ಟೇ ಮೂರ್ಖತನವಾದೀತು. ವ್ಯಕ್ತಿಸ್ವಾತಂತ್ರ್ಯ ಹಾಗೂ ಧಾರ್ಮಿಕ ಸ್ವಾತಂತ್ರ್ಯ ಕೊಟ್ಟದ್ದೇ ಸಂಸ್ಕೃತ.

ಹಿಬ್ರು ಭಾಷೆಗೂ ಸತ್ತ ಭಾಷೆ ಎಂದೇ ಕರೆಯುತ್ತಿದ್ದರು. ಆದರೆ ಇಸ್ರೇಲ್ ದೇಶ ನಿರ್ಮಾಣವಾದ ಮೇಲೆ ಅದನ್ನು ಜೀವಂತಗೊಳಿಸಿ ತಮ್ಮ ಮಕ್ಕಳಿಗೆ ಯಹೂದಿಗಳು ಹಿಬ್ರು ಭಾಷೆಯಲ್ಲಿಯೇ ಜ್ಞಾನ-ವಿಜ್ಞಾನದ ಶಿಕ್ಷಣ ಕೊಟ್ಟು ಸ್ವಾಭಿಮಾನಿಗಳನ್ನಾಗಿ ಮಾಡಿದ್ದಾರೆ.

ಭಾರತದ ಅಂತಃಸತ್ವ ಸಂಸ್ಕೃತ ಭಾಷೆಯಲ್ಲಿ ಅಡಗಿರುವುದರಿಂದ ಅದಕ್ಕಾಗಿ ಕರ್ನಾಟಕ ಸರಕಾರ ಒಂದು ವಿಶ್ವವಿದ್ಯಾಲಯ ನಿರ್ಮಿಸಿ ಆಸಕ್ತ ವಿದ್ಯಾರ್ಥಿಗಳಿಗೆ ಓದಲು ಹಾಗೂ ಸಂಶೋಧಿಸಲು ಒಂದು ಅವಕಾಶ ಕಲ್ಪಿಸಿಕೊಟ್ಟರೆ ತಪ್ಪೇನಿದೆ?

**ಕಲ್ಯಾಣ ಮರಳಿ**

ಈಗಿನ ದಿನಗಳಲ್ಲಿ ವೇದ ಉಪನಿಷತ್ತುಗಳು ಕೆಲವೇ ವರ್ಗದ ಜನರ ಸೊತ್ತಾಗಿ ಉಳಿದಿಲ್ಲ. ಹಾಗಾಗಿ ನಮಗೆಲ್ಲಾ ನಮ್ಮ ಹಿರಿಯರು ಅದೇನು ಮಾರ್ಗದರ್ಶನವನ್ನು ನೀಡಿದ್ದಾರೆ ಎಂಬುದನ್ನು ಅರಿತುಕೊಳ್ಳುವುದು ಸಾಧ್ಯವಿದೆ.

**ತೀರ್ಥರಾಮ ವಳಲಂಬೆ**

ಸಂಸ್ಕೃತ ವಿವಿ ಸ್ಥಾಪನೆ ಬೇಕೋ, ಬೇಡವೋ ಎನ್ನುವ ಚರ್ಚೆಯಲ್ಲಿ ಸಂಸ್ಕೃತ ಮೃತಭಾಷೆ, ಅದರಿಂದ ಪ್ರಯೋಜನ ಏನು ಎಂದು ಪ್ರಶ್ನಿಸಿದವರಿದ್ದಾರೆ. ಸಂಸ್ಕೃತ ವ್ಯಾಪ್ತಿ ಚಿಕ್ಕದು ಎನ್ನುವ ಮಾತನ್ನು ಆಡಿದವರೂ ಇದ್ದಾರೆ. ಆದರೆ ಸಂಸ್ಕೃತ ಎನ್ನುವುದು ಈಗಾಗಲೇ ಪ್ರಪಂಚದ ಅನೇಕ ದೇಶಗಳಲ್ಲಿ ಪ್ರವಹಿಸಿದೆ. ಬುದ್ಧಿವಂತ ವಿದೇಶಿಗರು ಅದರಲ್ಲಿರುವ ಒಳ್ಳೆಯ ಅಂತಃಸತ್ವವನ್ನು ಹೀರಿಕೊಂಡಿದ್ದಾರೆ ಎನ್ನುವ ಸತ್ಯ ಇತಿಹಾಸ ನೋಡಿದಾಗ ತಿಳಿಯುತ್ತದೆ. ಫ್ರೆಂಚ್ ವಿದ್ವಾಂಸರಾದ ಡೆಕೆಜಿ, ಯೂಜೀನ್ ಬರ್ನೋಲ್ ಮುಂತಾದವರು ವೇದ, ಗೃಹ್ಯಸೂತ್ರ ಆಚಾರಗಳ ಬಗ್ಗೆ ವಿಮರ್ಶಾತ್ಮಕ ಅಧ್ಯಯನ ಮಾಡಿದ್ದಾರೆ. ಲೆವಿಯ ಶಿಷ್ಯ ಮಾರ್ಸೆಲ್ ಮೋ ಮಾನವವರ್ಣನಾ ವಿಜ್ಞಾನ ಅಧ್ಯಯನಕ್ಕೆ ಸಂಸ್ಕೃತ ಬಳಸಿಕೊಂಡ. ಹೀಗೆ ಸಂಸ್ಕೃತ ಪ್ರಪಂಚದಾದ್ಯಂತ ಹರಡಿದೆ.

**ಪ್ರೊ. ಎಂ.ಕೆ. ಶ್ರೀಧರ್**

ಸಂಸ್ಕೃತ ವಿರೋಧಿಗಳು ಕಹಿಮಾತ್ರೆಗೆ ಸಿಹಿ ಸವರಿದಂತೆ ಏನೇ ಕಾರಣಗಳನ್ನು ನೀಡಿದರೂ, ಒಳಗಿನ ಸತ್ಯ ಒಂದೇ. ಅದುವೇ ಸಂಸ್ಕೃತ ಬ್ರಾಹ್ಮಣರ ಭಾಷೆ ಎಂಬ ಪೂರ್ವಾಗ್ರಹ. ಸಂಸ್ಕೃತವನ್ನೂ ವಿರೋಧಿಸುವ ಮೂಲಕ ಬ್ರಾಹ್ಮಣರನ್ನೂ ನಿಯಂತ್ರಿಸಬೇಕು – ಒಂಥರಾ 'ಹೊಟ್ಟೆಗೆ ಒದ್ದು ಬಾಯಹಲ್ಲು ಉದುರಿಸಬೇಕು' ಎಂಬ ದುರಾಲೋಚನೆ. ಎರಡನೆಯದಾಗಿ 'ನಾವಂತೂ ಸಂಸ್ಕೃತ ಕಲಿಯುವುದಿಲ್ಲ. ಇತರರು ಕಲಿತು ಪ್ರತಿಭಾವಂತರಾದರೆ ನಮ್ಮ ಪ್ರತಿಷ್ಠೆ ಎಲ್ಲಿ ಕಡಿಮೆ ಯಾಗುತ್ತದೋ. ಏನಿದ್ದರೂ ನಾವು ಹೇಳಿದ್ದೇ ಸ್ಥಾಪನೆಯಾಗಬೇಕು. ನಾವೇ ಅದರ ಮುಖ್ಯಸ್ಥರಾಗಬೇಕು' ಎಂಬ ಸ್ವಾರ್ಥ, ಸಂಕುಚಿತ ಮನೋಭಾವ ಢಾಳವಾಗಿದೆ. ಈ ಸಂಕುಚಿತತೆ ಅಳಿಯಲಿ. ಸಮನ್ವಯದ ದಿವ್ಯಪ್ರಭೆ ಪಸರಿಸಲಿ. ಉತ್ತಮಾಂಶ ಎಲ್ಲೆಡೆಯಿಂದಲೂ ನಮ್ಮತ್ತ ಬರಲಿ.

**ಸಚ್ಚಿದಾನಂದ ನಾ. ಕಾಶೀಕರ**

ಇಂದು ಆಯುರ್ವೇದ ವೈದ್ಯ ಸಾಹಿತ್ಯ ಇಂಗ್ಲಿಷ್, ಹಿಂದಿಗೆ ಭಾಷಾಂತರವಾಗುತ್ತಿದೆ. ಎರವಲು ಭಾಷೆಗಳ ಕಳಪೆ ಸಾಹಿತ್ಯದಿಂದ ಮೂಲ ಉದ್ದೇಶಕ್ಕೆ ಘನವಾದ ಕೊಡಲಿ ಏಟು ಬಿದ್ದಾಗಿದೆ. ಅಧ್ಯಯನ ಎನ್ನುವುದು ಅಷ್ಟೇ, ಮೂಲ ಸಂಸ್ಕೃತ ಗ್ರಂಥಗಳ ನೆರವಿನಿಂದ ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಮುಖ್ಯವಾಗಿ ಇಂದು ಎಲ್ಲ ಆಯುರ್ವೇದ ಕಾಲೇಜುಗಳಲ್ಲಿ ಸಂಸ್ಕೃತ ಬೆಂಚಿಲ್ಲದಿರುವುದು ದುರಂತ. ಪರಿಪಕ್ವ ಸಂಶೋಧನೆ ಎನ್ನುವುದು ಈ ಆಯುರ್ವೇದ ಕ್ಷೇತ್ರದಿಂದ ಒಕ್ಕಲೆದ್ದಂತೆ ಕಾಣುತ್ತಿದೆ. ಆಯುರ್ವೇದವನ್ನು ಮುಂದಿನ ಪೀಳಿಗೆಗೆ ಕಾಪಿಡುವ ನಿಟ್ಟಿನಲ್ಲಿ ಇಂದಿನ ಅಧ್ಯಯನ, ಪ್ರಯತ್ನಗಳು ಪೂರಕವಾಗಿಲ್ಲ ಎಂಬ ಅಂಶ ಯಾರ ಕಣ್ಣಿಗೂ ಬೀಳುತ್ತಿಲ್ಲ.

**ಡಾ. ಸತ್ಯನಾರಾಯಣ ಭಟ್ ಪಿ.**

ದ್ವೇಷ, ಮಾತ್ಸರ್ಯ, ಕೀಳರಿಮೆ, ಹಿಂಜರಿಕೆಗಳನ್ನು ದೂರೀಕರಿಸಿ ಜಾತಿ–ಮತ–ನಿರಪೇಕ್ಷವಾಗಿ ವಿಶಾಲ ಸಮಾಜದ ಬೇರೆ ಬೇರೆ ಮಗ್ಗುಲುಗಳಿಂದ ಸಂಸ್ಕೃತ ವಿದ್ಯಾಭಿಲಾಷಿಗಳು ಒದಗಿಬಂದು ಈ ನೂತನ ಸಂಸ್ಕೃತ ವಿ.ವಿ.ಯನ್ನು ಸಂಪನ್ನಗೊಳಿಸಬೇಕಾಗಿದೆ. ಸಂಸ್ಕೃತವು ಕೇವಲ ಬ್ರಾಹ್ಮಣರ ಭಾಷೆಯಲ್ಲ ಎಂಬ ಡಾ. ಭೈರಪ್ಪನವರ ಮಾತನ್ನು ಸತ್ಯಾಸತ್ಯಗೊಳಿಸಬೇಕಾಗಿದೆ. ಆದರೆ ಹಾಗಾಗಬೇಕಾದರೆ ಬ್ರಾಹ್ಮಣರ ಮನಬಿಚ್ಚಿದ ಸಹಕಾರ ಅಗತ್ಯ. ಅವರು ಒಂದಿಷ್ಟು ತ್ಯಾಗ, ಔದಾರ್ಯ, ವಿಶಾಲ ಮನೋಧರ್ಮ ಪ್ರಕಟಿಸದಿದ್ದಲ್ಲಿ ಈ ಉದ್ದೇಶ ಪೂರ್ಣ ಫಲಿಸಲಾರದೆನಿಸುತ್ತದೆ.

**ಡಾ. ಅಮೃತ ಸೋಮೇಶ್ವರ**

ಸಂಸ್ಕೃತ ಒಂದು ಭಾಷೆ ಮಾತ್ರವಲ್ಲ ಭಾರತೀಯ ಸಂಸ್ಕೃತಿಯ ಅಕ್ಷರಾಕೃತಿ. ಈಗ ಕನ್ನಡ ವೈಜ್ಞಾನಿಕವಾಗಿ ಬೆಳೆಯಬೇಕಾದರೆ ಸಂಸ್ಕೃತದ ಆಳವಾದ ಅಭ್ಯಾಸ ಬೇಕು. ಕನ್ನಡ ಪದಗಳಂತೆ ಬಳಕೆಯಲ್ಲಿರುವ ಸಂಸ್ಕೃತ ಪದಗಳಿಂದ ಹೊಸ ಹೊಸ ಪದಗಳು, ನುಡಿಗಟ್ಟುಗಳು ಸಾಧ್ಯ. ಸಂಸ್ಕೃತ ಮತ್ತು ಕನ್ನಡ ಹಾಲು ಜೇನಿನಂತೆ ಬೆರೆತಿವೆ. ಇದರಿಂದಾಗಿಯೇ ಅತ್ಯಂತ ಹೊಸ ವಿಚಾರಗಳನ್ನು ಮಾನವೀಯ ವಿಶ್ಲೇಷಣೆಯನ್ನು ಆಧುನಿಕ ಕಲ್ಪನೆಗಳನ್ನು ಕನ್ನಡದಲ್ಲಿ ಮಾಡಲಾಗಿದೆ. ಅದರ ಫಲವಾಗಿಯೇ ಕುವೆಂಪು ಮಾತ್ರವಲ್ಲ ಏಳು ಜನ ಜ್ಞಾನಪೀಠಗಳನ್ನು ಸೃಷ್ಟಿಸಿದ ಭಾಗ್ಯ ಕನ್ನಡದ್ದಾಗಿದೆ.

ಇಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆ ಆದರೆ ಅದೊಂದು ಸೌಭಾಗ್ಯ. ಇದರ ಗುಣಮಟ್ಟಕ್ಕೆ ಹೆಚ್ಚು ನಿಗಾಕೊಟ್ಟರೆ ರಾಷ್ಟ್ರೀಯ ಅಂತಾರಾಷ್ಟ್ರೀಯ ಜಿಜ್ಞಾಸುಗಳು ಇಲ್ಲಿಗೆ ಬರುತ್ತಾರೆ. ಅವರೊಡನೆ ಬೆರೆಯುವ, ಚರ್ಚಿಸುವ ಸಂವಾದಿಸುವ ವಾತಾವರಣ ಸೃಷ್ಟಿ ಆಗುತ್ತದೆ. ಇಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ವಿಷಯವನ್ನು ಕಡ್ಡಾಯ ಮಾಡಿದರೆ ಕನ್ನಡ ಕಂಪು ಎಲ್ಲಕಡೆ ಹರಡೀತು. ಪೂರ್ವಾಗ್ರಹ ಪೀಡಿತರಾಗದೆ ಭಾರತೀಯವೆಲ್ಲವೂ ಅಗ್ರಾಹ್ಯ ಎನ್ನುವ ವಿದೇಶಿ ಕೃಪಾಪೋಷಿತ ಎಡಪಂಥೀಯ ಮನೋಧರ್ಮದಿಂದ ಹೊರಬಂದು ನಮ್ಮ ಸಂಸ್ಕೃತಿಯನ್ನು ನಮ್ಮ ಭಾಷೆಗಳನ್ನು ಅಭಿಮಾನದಿಂದ ಕಾಣುವ ಹೆಮ್ಮೆ ಬೆಳೆಸಿಕೊಂಡು ವಿಶ್ವಕ್ಕೇ ಮಾದರಿಯಾಗುವ ವಿಶ್ವವಿದ್ಯಾಲಯ ಸ್ಥಾಪನೆಗೆ ಕೈಜೋಡಿಸೋಣ.

**ಸತ್ಯಬೋಧ**

ಸಂಸ್ಕೃತದಿಂದ ಯಾವುದೇ ತಾಯಿನುಡಿಗೆ, ಪ್ರಾದೇಶಿಕ ಭಾಷಾ ಬೆಳವಣಿಗೆಗೆ ತೊಂದರೆಯಾಗಿಲ್ಲ. ಜ್ಞಾನದ ವಿವಿಧ ಶಾಖೆಗಳ ಪರಿಧಿ ವಿಸ್ತರಣೆಗೆ ಸಂಸ್ಕೃತ ಪುಷ್ಟಿ ನೀಡಿದೆ.

ಸಂಸ್ಕೃತದ ಬಗ್ಗೆ ಅರಿವಿಲ್ಲದವರು ವಿರೋಧಕ್ಕಾಗಿ ವಿರೋಧ, ವಾದಕ್ಕಾಗಿ ವಾದ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಸಂಸ್ಕೃತ ಕನ್ನಡ ಬೆಳವಣಿಗೆಗೆ ಮಾರಕವಲ್ಲ.

ವಿ.ವಿ. ಸ್ಥಾಪನೆಯನ್ನು ಉದ್ದೇಶ ವಕ್ರದೃಷ್ಟಿಯಿಂದ ನೋಡುವುದು ಸರಿಯಲ್ಲ.

**ಪ್ರೊ. ಡಿ. ಪ್ರಹ್ಲಾದಾಚಾರ್ಯ**

'ಪೂರ್ವಾಗ್ರಹ ಪೀಡಿತರಾಗಬೇಡಿ. ಸಂಸ್ಕೃತ ವಿವಿ ಅಗತ್ಯವನ್ನು ಅರಿತುಕೊಳ್ಳಿ. ಕಾಂಗ್ರೆಸ್ ಆಳ್ವಿಕೆಯ ರಾಜ್ಯಗಳಲ್ಲೂ ವಿವಿ ಸ್ಥಾಪಿಸಲಾಗಿದೆ. ಇಲ್ಲಿ ಮಾತ್ರ ವಿರೋಧ ಏಕೆ?'

**ಅರವಿಂದ ಲಿಂಬಾವಳಿ**

ಸಂಸ್ಕೃತ ನಾಟಕಗಳ ಮೂಲಕ, ವೃತ್ತಿಪರ ತರಬೇತಿಗಳ ಮೂಲಕ ಭಾಷೆಯನ್ನು ಜನಪ್ರಿಯಗೊಳಿಸುವ ಕೆಲಸಗಳು ನಡೆಯುತ್ತಿವೆ. ಇದರ ಜತೆಗೆ ಹೆನ್ರಿಚ್ ರಾತ್ ಮತ್ತು ಜಾನ್ ಎರ್‌ನೆಸ್ಟ್‌ಹ್ಯಾನ್‌ಲೆಡನ್ ಅವರು ಸಂಸ್ಕೃತದಲ್ಲಿ ಯುರೋಪಿಯನ್ ಸ್ಕಾಲರ್‌ಶಿಪ್ ಪ್ರಾರಂಭಿಸಿದ್ದಾರೆ. ಆ ಮೂಲಕ ಇಂಡೊ–ಯುರೋಪಿಯನ್ ಭಾಷಾ ಕುಟುಂಬ ಸ್ಥಾಪನೆ ಸಾಧ್ಯವಾಗಲಿದೆ.

ಅಲ್ಲದೆ, ಸಂಸ್ಕೃತ ಮತ್ತು ಅದರ ಸಂಬಂಧಿ ಭಾಷೆಗಳು ಚೀನಾ ಹಾಗೂ ಟಿಬೆಟ್ ಮೇಲೆ ಪ್ರಭಾವವನ್ನು ಬೀರಿದೆ. ಇವೆಲ್ಲಕ್ಕಿಂತಲೂ ಹೆಚ್ಚು ಪ್ರಮುಖವಾದದ್ದು ಯಾವುದೆಂದರೆ, ಕಂಪ್ಯೂಟರ್‌ಗೆ ಸಂಸ್ಕೃತವು ಅತಿ ಹೆಚ್ಚು ಸೂಕ್ತ ಭಾಷೆ ಎನ್ನುವುದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ಈ ಎಲ್ಲ ಕಾರಣಗಳಿಂದ ಸಂಸ್ಕೃತಕ್ಕೆ ನವತಾರುಣ್ಯ ಪ್ರಾಪ್ತವಾಗಲಿದೆ.

**ಪಲ್ಲವಿ ಸಿಂಗ್**

**ಕೃಪೆ: ವಿಜಯಕರ್ನಾಟಕ**

# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ: ಇಂದು-ಮುಂದು

**ಪ್ರಸ್ತಾವ:**

ಸಂಸ್ಕೃತ ಭಾಷೆ, ಸಾಹಿತ್ಯ ಮತ್ತು ಶಾಸ್ತ್ರಗಳ ಬೆಳವಣಿಗೆಗಾಗಿ ಸರ್ಕಾರವು ಸಂಸ್ಕೃತ ವಿಶ್ವವಿದ್ಯಾಲಯವನ್ನು ಅಸ್ತಿತ್ವಕ್ಕೆ ತಂದಿದೆ. ಸುಮಾರು 150 ವರ್ಷಗಳ ಹಿಂದೆ ಮೈಸೂರಿನ ಮಹಾರಾಜರ ಆಶ್ರಯದಲ್ಲಿ ಸಂಸ್ಕೃತವು ಪ್ರಾರಂಭವಾಗಿ ಕ್ರಮೇಣ ಶ್ರೀಮನ್ಮಹಾರಾಜ ಸಂಸ್ಕೃತ ಪಾಠಶಾಲೆ ಸ್ಥಾಪಿತವಾಯಿತು. ಅನಂತರ ಬೆಂಗಳೂರಿನಲ್ಲಿ ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆ ಆರಂಭಗೊಂಡಿತು. ಅನೇಕ ಮಠಮಾನ್ಯಗಳಲ್ಲಿ ವೇದ ಪಾಠಶಾಲೆಗಳೂ ಸಂಸ್ಕೃತ ಪಾಠಶಾಲೆಗಳೂ ಆರಂಭವಾದುವು. ಶ್ರೀಮಂತರ, ವಿದ್ಯಾಪೋಷಕರ ಬಲದಿಂದ ಖಾಸಗಿಯಾಗಿ ಸಂಸ್ಕೃತಾಧ್ಯಯನವೂ ಬೆಳೆಯಿತು. ಸ್ವಾತಂತ್ರ್ಯಾನಂತರ ವಿಶ್ವವಿದ್ಯಾಲಯಗಳಲ್ಲಿ, ಪ್ರೌಢಶಾಲೆಗಳಲ್ಲಿ ಸಂಸ್ಕೃತಕ್ಕೆ ಪೂರಕವಾದ ಸ್ಥಾನವೇ ಇತ್ತು. ಆದರೆ, ಕಾಲಾನಂತರದಲ್ಲಿ ಶಾಲಾ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಭಾಷಾ ಸಾಹಿತ್ಯ ಮತ್ತು ಶಾಸ್ತ್ರಾಭ್ಯಾಸಗಳು ಕ್ಷೀಣಗೊಂಡವು. ಈ ಹಿನ್ನೆಲೆಯಲ್ಲಿ 2010ರಲ್ಲಿ ಬಿ.ಜೆ.ಪಿ. ಸರ್ಕಾರವು ದಕ್ಷಿಣ ಭಾರತದಲ್ಲಿ ರಾಜ್ಯ ವಿಶ್ವವಿದ್ಯಾಲಯವಾಗಿ ಕರ್ನಾಟಕದಲ್ಲಿ ಸ್ಥಾಪಿಸಿದೆ.

**ಪ್ರಧಾನ ಉದ್ದೇಶ**

* ಸಂಶೋಧನೆ ಮತ್ತು ಬೋಧನೆ ಸಮಸಮನಾಂತರವಾಗಿ ವಿಶ್ವವಿದ್ಯಾಲಯದಲ್ಲಿ ರೂಪಿಸುವುದು.
* ಉನ್ನತ ಶಿಕ್ಷಣದಲ್ಲಿ ಭಾರತೀಯ ವಿದ್ಯೆಗಳ ಜೊತೆ ಅಂತರ್‌ಶಿಸ್ತೀಯ ಅಧ್ಯಯನವನ್ನು ಈ ವಿಶ್ವ ವಿದ್ಯಾಲಯದ ಮೂಲಕ ರೂಪಿಸುವುದು.
* ಭಾರತೀಯ ವಿಜ್ಞಾನ ಶಾಖೆಯನ್ನು ಉದಾ.: ಯೋಗ, ಆಯುರ್ವೇದ, ಖಭೌತವಿಜ್ಞಾನ, ಗಣಿತಶಾಸ್ತ್ರ, ಜ್ಯೋತಿಷ್ಯ ಮುಂತಾದವುಗಳನ್ನು ಸಂಶೋಧಿಸಿ ಬೆಳೆಸುವುದು.
* ಪ್ರಾಚೀನ ಜ್ಞಾನ ಮತ್ತು ಆಧುನಿಕ ಜ್ಞಾನಗಳನ್ನು ಒಟ್ಟಿಗೆ ಸೇರಿಸಿ ತನ್ಮೂಲಕ ಹೊಸಬಗೆಯ ತೌಲನಿಕ ಅಧ್ಯಯನ ವನ್ನು ರೂಪಿಸುವುದು.
* ಉನ್ನತಾಧ್ಯಯನದಲ್ಲಿ ಎಂ.ಎ., ಪಿಎಚ್.ಡಿ. ಇಂಟಿಗ್ರೇಟೆಡ್ ಅಧ್ಯಯನವನ್ನು ರೂಪಿಸಿ, ಸಂಶೋಧನೆಗೆ ಹೆಚ್ಚಿನ ಒತ್ತನ್ನು ನೀಡುವುದು.
* ಪ್ರಾಚೀನ ಮತ್ತು ನವೀನ ಶಾಸ್ತ್ರಶಾಖೆಗಳಲ್ಲಿ ಡಿಪ್ಲೊಮಾ ಕೋರ್ಸ್‌ಗಳನ್ನು ರೂಪಿಸುವುದು.
* ವಿದ್ಯಾರ್ಥಿಗಳಲ್ಲಿ ಭಾಷಾಪ್ರಜ್ಞೆ, ಶಾಸ್ತ್ರಪ್ರಜ್ಞೆಗಳನ್ನು ರೂಪಿಸುತ್ತಲೇ ಆನ್ವಯಿಕ ಪದ್ಧತಿಗೆ ಪ್ರೋತ್ಸಾಹ ನೀಡುವುದು.
* ಪುರಾತನ-ನೂತನ ಲೇಖಕರ, ವಿದ್ವಾಂಸರ ಅಲಭ್ಯ ಕೃತಿಗಳನ್ನು ಮೂಲಪಠ್ಯ, ಅನುವಾದ ಮತ್ತು ಟಿಪ್ಪಣಿಸಹಿತ ಪ್ರಕಟಿಸುವುದು. ಕನ್ನಡದಲ್ಲಿ ಬಂದಿರುವ ಅಪೂರ್ವ ಹಾಗೂ ಉತ್ತಮೋತ್ತಮ ಕೃತಿಗಳನ್ನು ಸಂಸ್ಕೃತಕ್ಕೆ ಭಾಷಾಂತರಿಸಿ ಪ್ರಕಟಿಸುವುದು.
* ತಾಲ್ಲೂಕು ಮಟ್ಟ, ಜಿಲ್ಲಾಮಟ್ಟ ಮತ್ತು ರಾಜ್ಯಮಟ್ಟದಲ್ಲಿ ಸಂಸ್ಕೃತ ಭಾಷೆ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಾಗೂ ಪ್ರಾಚೀನ ಜ್ಞಾನಕ್ಷೇತ್ರಗಳಿಗೆ ಸಂಬಂಧಿಸಿದಂತೆ ಜನಪ್ರಿಯವಾದ ಉಪನ್ಯಾಸಗಳನ್ನು ಏರ್ಪಡಿಸುವುದು. ಹಾಗೂ ಉನ್ನತ ಅಧ್ಯಯನಕ್ಕೆ ತಕ್ಕ ವಾತಾವರಣವನ್ನು ರೂಪಿಸುವುದು.
* 'ಸಂಸ್ಕೃತ ಭಾಷಾಪಡೆ' ಸ್ಥಾಪನೆ ಮಾಡಿ ಗ್ರಾಮ, ತಾಲ್ಲೂಕು, ಜಿಲ್ಲೆಗಳಲ್ಲಿ ಸಂಸ್ಕೃತೋತ್ಸವ, ಸಂಸ್ಕೃತ ಪುಸ್ತಕೋತ್ಸವ, ಸಂಸ್ಕೃತ ನಾಟಕೋತ್ಸವ ಮತ್ತು ಪ್ರಾಚೀನ ಸಂಸ್ಕೃತ ವಿಜ್ಞಾನೋತ್ಸವಗಳನ್ನು ವ್ಯಾಪಕವಾಗಿ ನಡೆಸುವುದಕ್ಕೆ ಪ್ರೋತ್ಸಾಹ ನೀಡುವುದು.
* ದೂರಶಿಕ್ಷಣದ ಮೂಲಕ ಸಂಸ್ಕೃತವನ್ನು ಕಲಿಸುವುದು.
* ರಾಜ್ಯದ ಎಲ್ಲಾ ವಲಯಗಳಲ್ಲೂ ಸಂಜೆ ಹಾಗೂ ರಜಾದಿನಗಳಲ್ಲಿ ಸಂಸ್ಕೃತ ಭಾಷಾ ಕಲಿಕೆಯನ್ನು ಭಗವದ್ಗೀತೆ ಹಾಗೂ ರಾಮಾಯಣದ ಮೂಲಕ ಕಲಿಸುವುದು.
* ಪ್ರತಿ ಹದಿನೈದು ದಿನಗಳಿಗೊಮ್ಮೆ ಸಂಸ್ಕೃತ ನಾಟಕಗಳನ್ನು ಆಡಿಸುವುದು, ಅದಕ್ಕೆ ಪ್ರೋತ್ಸಾಹ ನೀಡುವುದು.
* ಭಾಷೆ, ಸಾಹಿತ್ಯ ಮತ್ತು ವಿವಿಧ ಶಾಸ್ತ್ರಗಳಲ್ಲಿ ಸೇವೆ ಸಲ್ಲಿಸಿದವರಿಗೆ ರಾಜ್ಯೋತ್ಸವ ಹಾಗೂ ಇತರೆ ಪ್ರಶಸ್ತಿಗಳಿಗೆ ಪೂರಕವಾಗಿ ಪ್ರತಿಸ್ಪಂದಿಸುವುದು.
* ವೇದ ಕಲಿಕೆಗೆ ಪ್ರೋತ್ಸಾಹ. ವೇದ ಕಾರ್ಯಕ್ರಮವನ್ನು ಸಿ.ಡಿ. ಮತ್ತು ಡಿ.ವಿ.ಡಿ. ಮೂಲಕ ಸಂಗೋಪನ ಗೊಳಿಸುವುದು.
* ವಿಶ್ವವಿದ್ಯಾಲಯದಲ್ಲಿ ಉನ್ನತ ಪ್ರಶಸ್ತಿಯನ್ನು ಸ್ಥಾಪಿಸಿ ಪ್ರತಿವರ್ಷ ಮೂವರು ವಿದ್ವಾಂಸರಿಗೆ ಗೌರವ ನೀಡುವುದು.
* ಭಾರತದ ವಿವಿಧ ಸಂಸ್ಕೃತ ವಿಶ್ವವಿದ್ಯಾಲಯಗಳ ಜತೆ ಸೇರಿ ಹೊಸ ಯೋಜನೆಗಳನ್ನು ಜಂಟಿಯಾಗಿ ತೆಗೆದುಕೊಳ್ಳುವುದು. ವಿಚಾರ ಸಂಕಿರಣ, ಕಾರ್ಯಾಗಾರ ಮತ್ತು ವಿವಿಧ ಬಗೆಯ ಶಾಸ್ತ್ರಗೋಷ್ಠಿಗಳನ್ನು ಸಾಂಪ್ರದಾಯಿಕ ನೆಲೆಯಲ್ಲಿ ಬೆಳೆಸುವುದು.

**ಶೈಕ್ಷಣಿಕ ಕಾರ್ಯಗಳು**

* ಪಾಠಶಾಲೆ ಮತ್ತು ಕಾಲೇಜುಗಳನ್ನು ಮೊದಲು ವ್ಯವಸ್ಥೀಕರಣ ಮತ್ತು ಸಬಲೀಕರಣಗೊಳಿಸುವುದು.
* ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿ ಪ್ರೋತ್ಸಾಹಿಸುವುದು.
* ಪಾಠಶಾಲೆ ಮತ್ತು ಕಾಲೇಜುಗಳಲ್ಲಿ ಉತ್ತಮ ಗ್ರಂಥ ಭಂಡಾರ ರೂಪಿಸುವುದು.
* ಕಾಲೇಜುಗಳಲ್ಲಿ ಉತ್ತಮ ವಿದ್ಯಾರ್ಥಿನಿಲಯವನ್ನು ರೂಪಿಸಿ ಸ್ಥಳೀಯ ದಾನಿಗಳ ಮೂಲಕ ಹಾಗೂ ಆಂಶಿಕವಾಗಿ ಸರ್ಕಾರದ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮ ಅಶನ–ವಸನಗಳನ್ನು ನೀಡುವುದು.
* ಪ್ರತಿ ತಾಲ್ಲೂಕು, ಜಿಲ್ಲೆಗಳಲ್ಲಿ ಸಂಸ್ಕೃತೋತ್ಸವಗಳನ್ನು ವಿದ್ಯಾರ್ಥಿಗಳಿಂದ ನಡೆಸಿ ಅನೇಕ ಬಗೆಯ ಸಂಸ್ಕೃತ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರೋತ್ಸಾಹಿಸುವುದು.
* ಪ್ರತಿವರ್ಷ ವಿದ್ವನ್ಮಧ್ಯಮಾ, ವಿದ್ವದುತ್ತಮಾ ಮತ್ತು ವೇದಶಾಖೆಗಳ ಅಗ್ರಪಂಕ್ತಿಯಲ್ಲಿ ಉತ್ತಮ ಅಂಕಗಳನ್ನು ಪಡೆದವರಿಗೆ ದತ್ತಿ ನಿಧಿಗಳಿಂದ, ಪೀಠಗಳಿಂದ ಮತ್ತು ಸಾರ್ವಜನಿಕ ವಲಯಗಳಿಂದ ನಗದು ರೂಪದಲ್ಲಿ ಪ್ರೋತ್ಸಾಹಿಸುವುದು ಮತ್ತು ಪ್ರಮಾಣಪತ್ರಗಳನ್ನು ನೀಡುವುದು.
* ದಲಿತ ಮತ್ತು ಹಿಂದುಳಿದ ವರ್ಗದಲ್ಲಿ ಸಂಸ್ಕೃತ ಕಲಿಯುವವರಿಗೆ ಪ್ರತ್ಯೇಕವಾಗಿ ಸೌಲಭ್ಯಗಳನ್ನು ಕಲ್ಪಿಸುವುದು.
* ಸಂಸ್ಕೃತ ಗಮಕ ಸ್ಪರ್ಧೆ, ಸಂಸ್ಕೃತ ಗಾಯನ ಸ್ಪರ್ಧೆ ಮತ್ತು ಇತರ ಸಂಸ್ಕೃತ ಆಟೋಟ ಸ್ಪರ್ಧೆಗಳನ್ನು ವಿದ್ಯಾರ್ಥಿಗಳಿಗಾಗಿ ಏರ್ಪಡಿಸುವುದು.
* ಇಂಗ್ಲಿಷ್ ಹಾಗೂ ಕಂಪ್ಯೂಟರ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ನೂತನವಾಗಿ ಪತ್ರಿಕೆಗಳನ್ನು ರೂಪಿಸಿ–ಸೇರಿಸುವುದು. ಇದನ್ನು ಕಾವ್ಯ, ಸಾಹಿತ್ಯ ಮತ್ತು ವಿದ್ವತ್ ಪದವಿಗಳಲ್ಲಿ ಕಡ್ಡಾಯಗೊಳಿಸುವುದು.
* ಪ್ರಥಮದಿಂದ ವಿದ್ವತ್ ಪದವಿಯವರೆಗೆ ವೈಜ್ಞಾನಿಕವಾಗಿ ಪಠ್ಯಪರಿಷ್ಕರಣ. ಪ್ರಾಚೀನ ಜ್ಞಾನವನ್ನು ಇಟ್ಟುಕೊಂಡು ನೂತನ ಜ್ಞಾನದ ಸೇರ್ಪಡೆ ಆಗುವಂತೆ ಪಠ್ಯಗಳನ್ನು ರೂಪಿಸುವುದು.
* ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಉತ್ತರ ಕನ್ನಡ, ದಕ್ಷಿಣ ಕರ್ನಾಟಕ ಮತ್ತು ಮಧ್ಯ ಕರ್ನಾಟಕಗಳಲ್ಲಿ ಸಂಸ್ಕೃತ ಉನ್ನತ ಸಂಶೋಧನ ಕೇಂದ್ರಗಳನ್ನು ತೆರೆದು ಅಲ್ಲಿ ಅಧ್ಯಯನಕ್ಕೆ, ಸಂಶೋಧನೆಗೆ ಹಿತವಾದ ವಾತಾವರಣವನ್ನು ರೂಪಿಸುವುದು ಹಾಗೂ ಸ್ಥಳೀಯ ಸಂಸ್ಕೃತಾಧ್ಯಯನ ಸಂಸ್ಥೆಗಳ ಜತೆ ಸಹಭಾಗಿತ್ವ ವಹಿಸುವುದು.
* ಐವತ್ತು ವರ್ಷಗಳಿಗೂ ಹಳೆಯದಾದ ಎಲ್ಲಾ ಸಂಸ್ಕೃತ ಪಾಠಶಾಲೆಗಳಿಗೆ ಪ್ಯಾಕೇಜ್ ಪ್ರೋಗ್ರಾಂಗಳನ್ನು ರೂಪಿಸುವುದು. ಆ ಪಾಠಶಾಲೆಗಳಿಗೆ ಅಲ್ಮೇರಾ, ಸಂಸ್ಕೃತ ಗ್ರಂಥ ಮತ್ತು ಟೇಬಲ್ಲುಗಳನ್ನು ಒದಗಿಸುವುದಕ್ಕೆ ಪ್ರೋತ್ಸಾಹ ನೀಡುವುದು.
* ಬಿ.ಎ. ಮತ್ತು ಎಂ.ಎ. ಪದವಿ ಪಡೆದವರಿಗೆ ಇರುವ ಆದ್ಯತೆಗಳನ್ನು ವಿದ್ವತ್ ಪದವಿ ಪಡೆದವರಿಗೂ ಕಲ್ಪಿಸಿಕೊಡುವುದು.

■ **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಕುಲಪತಿಗಳು
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

---

## ವಾಚಕರಲ್ಲಿ ಮನವಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತ ತ್ರೈಮಾಸಿಕ ವಾರ್ತಾಪತ್ರಿಕೆಯನ್ನು ಪ್ರಾರಂಭಿಸಿದೆ. ಈ ಪತ್ರಿಕೆಗೆ ನಿಮ್ಮ ಶಾಲೆ/ಕಾಲೇಜು ಹಾಗೂ ಇತರ ಕಡೆಗಳಲ್ಲಿ ಸಂಸ್ಕೃತ ಸಂಬಂಧಿತವಾದ ವರದಿಗಳನ್ನು ಕಳುಹಿಸಬಹುದು. ತಮ್ಮ ಪ್ರದೇಶಗಳಲ್ಲಿ ನಡೆದಂಥ ಸಂಸ್ಕೃತ ಕಾರ್ಯಕ್ರಮಗಳ ವರದಿಗಳನ್ನು ಭಾವಚಿತ್ರಸಹಿತ ಕಳುಹಿಸಿಕೊಡಲು ಈ ಮೂಲಕ ಕೋರಲಾಗಿದೆ. ನೀವು ಕಳುಹಿಸುವ ವರದಿಯು ಸ್ಪಷ್ಟವಾಗಿರಲೆಂಬುದು ನಮ್ಮ ಆಶಯ. ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಹನೀಯರ ವಿವರಗಳು ಭಾವಚಿತ್ರದ ಹಿಂಬದಿಯಲ್ಲಿ ಕಡ್ಡಾಯವಾಗಿ ನಮೂದಿತವಾಗಿರಲಿ.

**ಸಂಪಾದಕರು**

## ‘‘संस्कृतिप्रवाहकं संस्कृतं विराजताम्’’

**ಸಂಸ್ಕೃತಿಯ ಪ್ರವಾಹಕವಾದ ಸಂಸ್ಕೃತವು ವಿರಾಜಮಾನವಾಗಲಿ.**

# ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲಾ, ಮೈಸೂರು




## ಪಾಠಶಾಲೋದಯ ಮತ್ತು ಹಿನ್ನೆಲೆ

ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ದೂರದೃಷ್ಟಿಯಿಂದ ಶ್ರೀಮನ್ಮಹಾರಾಜ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸುವ ಪ್ರಯತ್ನ ಮೊದಲಾಯಿತು. ಇದಕ್ಕಾಗಿ ಮಹಾರಾಜರು ಒಂದು ಸಾವಿರ ರೂಪಾಯಿಗಳನ್ನು ಮೀಸಲಿಟ್ಟಿದ್ದರು. ಅವರ ಆಡಳಿತದಲ್ಲಿ ಪಾಠಶಾಲೆಯು ಪ್ರಾರಂಭವಾಯಿತು. ದುರದೃಷ್ಟವಶಾತ್ 1868ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ದಿವಂಗತರಾದರು. ಇವರ ಆಡಳಿತದಲ್ಲಿ ದಿವಾನರಾದ ಶ್ರೀ ರಂಗಾಚಾರ್ಯರು ಮಹಾರಾಜರ ಸಂಕಲ್ಪವನ್ನು ಸ್ಮರಿಸಿಕೊಂಡು ಪಾಠಶಾಲೆಯನ್ನು ಮುನ್ನಡೆಸಿದರು. ಅನ್ನಸತ್ರಕ್ಕಾಗಿ ಮೀಸಲಿಟ್ಟ ನಿಧಿಯು ಇರುವುದನ್ನು ಗಮನಿಸಿ ಇದರ ಸದುಪಯೋಗವನ್ನು ಮಾಡುವ ದೃಷ್ಟಿಯಿಂದ ಸರಸ್ವತಿಪ್ರಾಸಾದ ಎಂಬ ಹೆಸರಿನಿಂದ ಮುಮ್ಮಡಿ ಕೃಷ್ಣರಾಜ ಒಡೆಯರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದ ದಿವಾನ್ ಪೂರ್ಣಯ್ಯನವರ ಸತ್ರದಲ್ಲಿಯೇ ಪಾಠಶಾಲೆಯು ಉನ್ನತೀಕರಣಗೊಂಡಿತು. ನಂತರ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಇದಕ್ಕೆ ಹೆಚ್ಚು ಮಹತ್ವ ನೀಡಿ ಪ್ರೋತ್ಸಾಹ ನೀಡಿ ಶಿಕ್ಷಣ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಮುನ್ನಡೆಸಿದರು. ಈ ಪಾಠಶಾಲೆಯನ್ನು 'ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು' ಎಂದು ಪರಿವರ್ತಿಸಿದರು.

ಸಂಸ್ಕೃತ ಕಾಲೇಜಿನ ಶಿಕ್ಷಣದ ಶ್ರೇಯೋಭಿವೃದ್ಧಿಗಾಗಿ ಮಹಾರಾಜರು ದೇಶದ ಎಲ್ಲಾ ಭಾಗಗಳಿಗೂ ಮತ್ತು ವಿದೇಶಗಳಿಗೂ ಭೇಟಿ ನೀಡಿ ಅಲ್ಲಿಯ ವ್ಯವಸ್ಥೆಯನ್ನು ನೋಡಿ ಇಲ್ಲಿಯೂ ಸಹ ವ್ಯವಸ್ಥಿತವಾಗಿ ಪಾಠಶಾಲೆಯನ್ನು ಉನ್ನತೀಕರಿಸಬೇಕೆಂಬ ಉದ್ದೇಶದಿಂದ ಎಲ್ಲಾ ಶಾಸ್ತ್ರ, ವೇದ, ಆಗಮ ವಿದ್ವಾಂಸರನ್ನು ಕರೆತಂದು ಅವರಿಗೆ ಪ್ರೋತ್ಸಾಹ ನೀಡಿ ಈ ಪಾಠಶಾಲೆಯು ಅಭಿವೃದ್ಧಿ ಪಥದಲ್ಲಿ ಸಾಗಲು ಕಾರಣೀಭೂತರಾದರು. ಅನೇಕ ಮಹನೀಯರು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ವಿವಿಧ ರೀತಿಯ ದತ್ತಿಗಳನ್ನು ಇಟ್ಟಿರುತ್ತಾರೆ.

ಮೊದಲು ತರ್ಕಶಾಸ್ತ್ರ ಹಾಗೂ ವ್ಯಾಕರಣ ಶಾಸ್ತ್ರದ ಆಮೂಲಾಗ್ರ ಅಧ್ಯಯನಕ್ಕಾಗಿ ಇಬ್ಬರು ಉಪಾಧ್ಯಾಯರನ್ನು 1868ರಲ್ಲಿ ನಿಯಮಿಸಲಾಯಿತು. ಆಮೇಲೆ ಋಗ್ವೇದ ಹಾಗೂ ಯಜುರ್ವೇದ ಅಧ್ಯಾಪನಕ್ಕೆ ಅವಕಾಶ ಮಾಡಿಕೊಡಲಾಯಿತು. ಮೊದಲು ಮೂವತ್ತರಿಂದ ನಲವತ್ತು ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಬಂದಿದ್ದರು. ಇವತ್ತು ಈ ಪಾಠಶಾಲೆಯು ಹದಿನಾಲ್ಕು ವಿದ್ಯೆಗಳಲ್ಲಿ ಪರಿಣತರಾದ ಪಂಡಿತರನ್ನು ಹೊಂದಿ, ಕಾಲೇಜು ವಿಭಾಗ 229, ಆಗಮ ವಿಭಾಗ 286 ವಿದ್ಯಾರ್ಥಿಗಳಿಗೆ ಅಧ್ಯಯನದ ಸೌಕರ್ಯವನ್ನು ನೀಡುತ್ತಿದೆ. 1918ರಲ್ಲಿ ವಿದ್ಯಾರ್ಥಿಗಳ ವಸತಿ ಸೌಕರ್ಯಕ್ಕಾಗಿ 120 ಜನ ವಿದ್ಯಾರ್ಥಿಗಳಿಗೆ ವಾಸಿಸಲು ಅನುಕೂಲವಾಗುವಂತೆ ಸುಸಜ್ಜಿತವಾದ ಕೊಠಡಿಗಳನ್ನು ನಿರ್ಮಿಸಲಾಯಿತು. ಪುರುಷ ವಿದ್ಯಾರ್ಥಿಗಳಿಗೆ ಮಾತ್ರ ವಸತಿ ಸೌಕರ್ಯವಿದೆ.

**ಪಾಠಶಾಲೆಯ ಬೆಳವಣಿಗೆ:** ಈ ಮೊದಲಿದ್ದ ವಿಭಾಗಗಳ ಜೊತೆಗೆ 1883ರಲ್ಲಿ ಸಾಮವೇದ, ವೇದಶಾಸ್ತ್ರ, ವೇದಭಾಷ್ಯ, ಜ್ಯೋತಿಷ, ಸಂಗೀತ ಹಾಗೂ ವೈದ್ಯಶಾಸ್ತ್ರಗಳ ಆಮೂಲಾಗ್ರ ಅಧ್ಯಯನಕ್ಕೆ ಮತ್ತು 1884ರಿಂದ ಪೂರ್ವಮೀಮಾಂಸಾ ಶಾಸ್ತ್ರದ ಅಧ್ಯಯನಕ್ಕೆ ಅವಕಾಶ ಮಾಡಿಕೊಡಲಾಯಿತು. 1890ರಲ್ಲಿ ಅಧ್ಯಯನದ ಪ್ರೌಢಿಮೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಪ್ರೌಢ ವಿದ್ಯಾರ್ಥಿಗಳು ಉಪನಿಷತ್ ಹಾಗೂ ಭಗವದ್ಗೀತೆಯನ್ನು ಅಧ್ಯಯನ ಮಾಡಬೇಕೆಂದು ಕಡ್ಡಾಯ ಮಾಡಲಾಯಿತು. ಪಠ್ಯಕ್ರಮದಲ್ಲಿ ಗಣನೀಯ ವ್ಯತ್ಯಾಸ ಮಾಡದೇ 1917ರವರೆಗೂ ಒಂದೇ ರೀತಿಯ

ಪಠ್ಯಕ್ರಮವನ್ನು ಮುಂದುವರಿಸಲಾಯಿತು. ಪಠ್ಯಕ್ರಮವನ್ನು ಪರಿಷ್ಕರಿಸುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಯಿತು. (GO No. 3333-45 EDN, 103-15-07 Dated 27th September-1917) ಈ ಸಮಿತಿಯು ಒಂದೇ ಮಟ್ಟದ ಶಿಕ್ಷಣಕ್ಕೆ ಒಳಪಡಿಸುವಂತೆ ಸೂಚಿಸಿತು. ತಲಸ್ಪರ್ಶೀವಿದ್ವತ್ತನ್ನು ಪಡೆಯಲು ಅನುವಾಗುವ ದೃಷ್ಟಿಯಿಂದ ಸುವ್ಯವಸ್ಥಿತ ಪರೀಕ್ಷೆ ನಡೆಸಲು ಒಂದು ಪರೀಕ್ಷಾ ಮಂಡಳಿಯನ್ನು ರಚಿಸಲು ಸೂಚಿಸಿತು.

**ಪರೀಕ್ಷಾ ಪದ್ಧತಿ:** ಮಹಾಪಾಠಶಾಲೆಯಲ್ಲಿ ಮೊದಲು ವಾರ್ಷಿಕ ಪರೀಕ್ಷೆಯನ್ನು ಹೊರರಾಜ್ಯದ ವಿದ್ವಾಂಸರ ಸಹಾಯದಿಂದ ಆಸ್ಥಾನ ಧರ್ಮಾಧಿಕಾರಿಗಳೇ ನಡೆಸುತ್ತಿದ್ದರು.

1886ರಿಂದ ಮೈಸೂರು ಅರಮನೆಯಲ್ಲಿ ನಡೆಯುವ ನವರಾತ್ರಿ ಮಹೋತ್ಸವ ಕಾಲದಲ್ಲಿ ಪಂಡಿತ ಸಮಿತಿಯ ಎದುರಿನಲ್ಲಿಯೇ ಪರೀಕ್ಷೆ ನಡೆಯುತ್ತಿತ್ತು ಮತ್ತು ರಾಜಸಭೆಯಲ್ಲಿಯೇ ಮಹಾರಾಜರ ಅಮೃತ ಹಸ್ತದಿಂದಲೇ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುತ್ತಿತ್ತು. 1917ರಿಂದ ಸಂಸ್ಕೃತ ಪರೀಕ್ಷಾ ಸಮಿತಿಯು ಪರೀಕ್ಷೆಯನ್ನು ನಡೆಸುತ್ತಿತ್ತು.

**ಸ್ವಾತಂತ್ರ್ಯೋತ್ತರ ಸಂಸ್ಕೃತ ಶಿಕ್ಷಣ:** 1950ರಲ್ಲಿ ಕರ್ನಾಟಕ ಸರ್ಕಾರಕ್ಕೆ ಸಂಸ್ಕೃತ ಕಾಲೇಜುಗಳ ಆಡಳಿತವನ್ನು ವಹಿಸಿಕೊಡಲಾಯಿತು. ಈ ಕಾಲೇಜಿನ ಅಧ್ಯಯನವು ಕ್ರಮೇಣ ವಿಭಜನೆಗೊಂಡು ಆಯುರ್ವೇದ ವೈದ್ಯಕೀಯ ಶಿಕ್ಷಣ ಹಾಗೂ ಸಂಗೀತ ಶಿಕ್ಷಣ ಈ ತಾಣದಿಂದ ದೂರವಾಗಿ ಸ್ವತಂತ್ರವಾಯಿತು. 1976ರಲ್ಲಿ ಈ ಕಾಲೇಜಿನ ಶತಮಾನೋತ್ಸವವನ್ನು ಆಚರಿಸಲಾಗಿದ್ದು, ಶತಮಾನೋತ್ಸವ ಸಮಾರಂಭವು ಭಾರತ ದೇಶದ ಅಂದಿನ ಉಪರಾಷ್ಟ್ರಪತಿಗಳಾಗಿದ್ದ ಸನ್ಮಾನ್ಯ ಶ್ರೀ ಬಿ.ಡಿ. ಜತ್ತಿಯವರ ಸಮ್ಮುಖದಲ್ಲಿ ನೆರವೇರಿತ್ತು.

**ಸಮಕಾಲೀನ ಸಂಸ್ಕೃತ ಕಾಲೇಜು ಮತ್ತು ಇದರ ಬೆಳವಣಿಗೆ:** ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ವೇದ ಶಾಸ್ತ್ರ ಆಗಮಗಳ ಮೂಲಭೂತ ಅಧ್ಯಯನಕ್ಕೆ ಅವಕಾಶವಿದೆ. ಜಾತಿ ಮತ ಪಂಥಗಳ ನಿರ್ಬಂಧವಿಲ್ಲದೇ ಸರ್ವರಿಗೂ ಅಧ್ಯಯನ ಮಾಡುವ ಮುಕ್ತ ಅವಕಾಶವಿದೆ. ಸುಸಜ್ಜಿತವಾದ ವಿದ್ಯಾರ್ಥಿನಿಲಯವಿದೆ. ಈ ವಿದ್ಯಾರ್ಥಿನಿಲಯದಲ್ಲಿ 35 ಕೊಠಡಿಗಳಿದ್ದು, 200 ವಿದ್ಯಾರ್ಥಿಗಳಿಗೆ ಉಚಿತ ವಸತಿ ಸೌಲಭ್ಯ ನೀಡಲಾಗುತ್ತಿದೆ. ಶುಲ್ಕರಹಿತ ಶಿಕ್ಷಣ. ಮೈಸೂರು ನಗರದ ಮಹಾಜನತೆಯ, ಭೋಜನಾಲಯಗಳ, ಮಠ ಮಾನ್ಯಗಳ ಹಾಗೂ ಇತರ ಸಂಸ್ಥೆಗಳ ಔದಾರ್ಯದಿಂದಾಗಿ ವಿದ್ಯಾರ್ಥಿಗಳಿಗೆ ಉಚಿತ ಭೋಜನವೂ ದೊರೆಯುತ್ತದೆ. ಇತ್ತೀಚೆಗೆ ಸರ್ಕಾರವು ಹೊಸದಾಗಿ 9 ಕೊಠಡಿಗಳನ್ನು ಕಟ್ಟಿಸಿಕೊಟ್ಟಿದ್ದು ವಸತಿ ನಿಲಯದಲ್ಲಿ ಸುಮಾರು 250 ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯವು ಇರುತ್ತದೆ. ಕಳೆದ ವರ್ಷದಿಂದ ಈ ಕಾಲೇಜಿನ ವಸತಿ ನಿಲಯದ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ದಾನಿಗಳ ಮೂಲಕ ಉಚಿತ ಊಟದ ವ್ಯವಸ್ಥೆಯನ್ನು ಈ ಕಾಲೇಜಿನ ಪ್ರಾಂಶುಪಾಲರಾದ ಡಾ. ಭಾಷ್ಯಂ ಸ್ವಾಮೀಜಿಯವರು ವ್ಯವಸ್ಥೆ ಮಾಡಿಸಿರುತ್ತಾರೆ. ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಶಾಸಕರ ನಿಧಿಯಿಂದ ಕೊಳವೆ ಬಾವಿ ನಿರ್ಮಿಸಿಕೊಟ್ಟು ನೀರಿನ ವ್ಯವಸ್ಥೆ ಮಾಡಿಸಿರುತ್ತಾರೆ. ಕಳೆದ ಎರಡು ವರ್ಷಗಳಿಂದ ಈ ಕಾಲೇಜಿನ ಅಭಿವೃದ್ಧಿಗೋಸ್ಕರ ಸುಮಾರು 50 ಲಕ್ಷ ರೂಪಾಯಿಗಳ ಅನುದಾನವು ಸರ್ಕಾರದಿಂದ ಬಂದಿರುತ್ತದೆ.

**ವೇದಶಾಸ್ತ್ರ ಪೋಷಿಣಿ ಸಭಾ:** ಈ ಸಂಸ್ಥೆಯು ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವ 50ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಭೋಜನ ಸೌಕರ್ಯವನ್ನು ಒದಗಿಸುತ್ತಿದೆ.

ಪ್ರಸ್ತುತ ಈ ಕಾಲೇಜಿನಲ್ಲಿ ಸುಮಾರು 515 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 31 ಜನ ಅಧ್ಯಾಪಕರು (ಕಾಲೇಜು ಮತ್ತು ಆಗಮ ವಿಭಾಗವು ಸೇರಿದಂತೆ) ಅಧ್ಯಾಪನ ಮಾಡುತ್ತಿದ್ದಾರೆ. 9 ಜನ ಸಿಬ್ಬಂದಿಗಳು ಸೇವೆ ಸಲ್ಲಿಸುತ್ತಿದ್ದಾರೆ. ಈ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿರುವ ಸಾವಿರಾರು ವಿದ್ವಾಂಸರು ದೇಶ ವಿದೇಶಗಳಲ್ಲಿ ಸಂಸ್ಕೃತ ಸಾಹಿತ್ಯದ ಹಿರಿಮೆಯನ್ನು ಹೆಚ್ಚಿಸುವುದರ ಜೊತೆಗೆ ಮೈಸೂರು ನಗರದ ಮತ್ತು ಈ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಈ ಕಾಲೇಜು ಕರ್ನಾಟಕ ರಾಜ್ಯದಲ್ಲಿ ಮೊದಲು ಪ್ರಾರಂಭವಾದ ಪ್ರತಿಷ್ಠಿತ ಮತ್ತು ಐತಿಹಾಸಿಕ ಸಂಸ್ಕೃತ ಕಾಲೇಜಾಗಿದೆ.

ಈಗ ಈ ಕಾಲೇಜಿನಲ್ಲಿ ಈ ಕೆಳಗಿನ ತರಗತಿಗಳು ನಡೆಯುತ್ತಿವೆ: ಶಾಸ್ತ್ರ ವಿಭಾಗ 13 ವರ್ಷ.

1. ಪ್ರಥಮಾ, 2. ಕಾವ್ಯ, 3. ಸಾಹಿತ್ಯ, 4. ವಿದ್ವತ್ ಮಧ್ಯಮಾ, 5. ವಿದ್ವತ್ ಉತ್ತಮಾ.

**ವಿದ್ವತ್ ಶಾಖೆಗಳು:**

ನವೀನನ್ಯಾಯ, ವ್ಯಾಕರಣ, ಪೂರ್ವಮೀಮಾಂಸಾ, ವಿಶಿಷ್ಟಾದ್ವೈತ ವೇದಾಂತ, ಶಕ್ತಿವಿಶಿಷ್ಟಾದ್ವೈತ ವೇದಾಂತ, ಧರ್ಮಶಾಸ್ತ್ರ ಮತ್ತು ಅಲಂಕಾರ ಶಾಸ್ತ್ರ.

**ವೇದ ಶಾಖೆಗಳು:**

ಋಗ್ವೇದ, ಶುಕ್ಲಯಜುರ್ವೇದ, ಕೃಷ್ಣಯಜುರ್ವೇದ, ಸಾಮವೇದ. ಪ್ರತಿ ವೇದ ಶಾಖೆಯಲ್ಲಿ ತರಗತಿಗಳು 14 ವರ್ಷಗಳು: 1. ಪ್ರಥಮಾ, 2. ಪ್ರವೇಶ, 3. ಮೂಲ, 4. ಕ್ರಮಾಂತ,

 

**ಕಾಲೇಜಿನ ಪಾರ್ಶ್ವನೋಟಗಳು**

5. ಘನಾಂತ/ಶ್ರೌತಪ್ರಯೋಗ/ಸ್ಮಾರ್ತ ಪ್ರಯೋಗ.

**ಆಗಮ ವಿಭಾಗ:** ಅವಧಿ 5 ವರ್ಷ. ಪ್ರಸಕ್ತ ಆಗಮ ವಿಭಾಗವು ಧಾರ್ಮಿಕ ದತ್ತಿ ಇಲಾಖೆಯ ಆಡಳಿತಕ್ಕೆ ಸೇರಿದ್ದು, ಪರೀಕ್ಷೆಯನ್ನು ಕರ್ನಾಟಕ ರಾಜ್ಯ ಆಗಮ ಶಿಕ್ಷಣ ಮತ್ತು ಸಲಹಾ ಸಮಿತಿ ನಡೆಸುತ್ತಿದೆ. 1920ರಲ್ಲಿಯೇ ಮೊಟ್ಟ ಮೊದಲು ಆಗಮ ಶಿಕ್ಷಣ ಪ್ರಾರಂಭವಾಯಿತು. 1926ರಲ್ಲಿ 4 ವರ್ಷ ಅವಧಿಯ ವಿಸ್ತೃತ ಅಧ್ಯಯನ ಪ್ರಾರಂಭವಾಯಿತು. ಮೊದಲು ಶೈವ–ಪಾಂಚರಾತ್ರ–ವೈಖಾನಸ ಆಗಮಗಳು ಆರಂಭವಾಗಿದ್ದು, ಕಾಲಕ್ರಮೇಣ 1957ರಲ್ಲಿ ತಂತ್ರಸಾರ ಮತ್ತು ವೀರಶೈವಾಗಮ, 1977ರಲ್ಲಿ ಜೈನಾಗಮ ಆರಂಭಗೊಂಡವು. 13.02.1956ರಿಂದ ಆಗಮ ಶಿಕ್ಷಣ ಮತ್ತು ಪರೀಕ್ಷಾ ಸಲಹಾ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಇಲ್ಲಿಯವರೆಗೆ ಆಗಮ ಪರೀಕ್ಷೆಗಳನ್ನು ನಡೆಸಿಕೊಂಡು ಬರುತ್ತಿದೆ.

**ತರಗತಿಗಳು:** 1. ಪ್ರವರ – 3 ವರ್ಷ, 2. ಪ್ರವೀಣ – 2 ವರ್ಷ.

**ಆಗಮ ಶಾಖೆಗಳು:** 1. ಶೈವಾಗಮ,
2. ವೈಖಾನಸಾಗಮ,
3. ಪಾಂಚರಾತ್ರಾಗಮ,
4. ವೀರಶೈವಾಗಮ,
5. ತಂತ್ರಸಾರಾಗಮ, 6. ಜೈನಾಗಮ.

**ವಾಚನಾಲಯ:** ಆಕರ ಗ್ರಂಥಗಳ ಅಮೂಲ್ಯ ಪುಸ್ತಕ ಭಂಡಾರ ಇಲ್ಲಿದೆ. ಮಹಾರಾಜರವರು 1928ರಲ್ಲಿ ತಮ್ಮ ಸರಸ್ವತೀ ಭಂಡಾರದ 1671 ಹಸ್ತಪ್ರತಿಗಳನ್ನು, 2084 ಮುದ್ರಿತ ಪುಸ್ತಕಗಳನ್ನು ಈ ಕಾಲೇಜಿಗೆ ನೀಡಿದರು. ಸರಸ್ವತೀ ಪ್ರತಿಮೆಯೊಂದಿಗೆ ಸಕಲೋಪಕರಣ ಸಹಿತವಾಗಿ ಸರಸ್ವತೀ ಭಂಡಾರವನ್ನು ಈ ಕಾಲೇಜಿನಲ್ಲಿಯೇ ಸ್ಥಾಪಿಸಿದರು. ಈಗ 5000 ಗ್ರಂಥಗಳಿವೆ. ಇದಲ್ಲದೆ ಕಾಲೇಜಿನ ವಾಚನಾಲಯದಲ್ಲಿ 11800 ಪುಸ್ತಕ ಸಂಪತ್ತಿದೆ.

**ಕಾಲೇಜಿನ ಶೈಕ್ಷಣಿಕ ಸಾಧನೆ:** ಮೈಸೂರಿನ ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ 515 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಫಲಿತಾಂಶ ಉತ್ತಮವಾಗಿದೆ. ಪಠ್ಯೇತರ ಚಟುವಟಿಕೆಗಳಲ್ಲಿ ಗಣನೀಯ ಸಾಧನೆ ಕಂಡುಬಂದಿವೆ. ಅಖಿಲ ಭಾರತ ಮಟ್ಟದ ಶಾಸ್ತ್ರ ವಾಕ್ಪ್ರತಿಯೋಗಿತಾ ಸ್ಪರ್ಧೆಯಲ್ಲಿ ನಿರಂತರವಾಗಿ ವಿಜಯ ಸಾಧಿಸಿ ಕರ್ನಾಟಕಕ್ಕೆ ಪರ್ಯಾಯ ಪಾರಿತೋಷಕ ಗಳಿಸಿ ಕೀರ್ತಿ ತಂದಿದ್ದಾರೆ. ರಾಜ್ಯಮಟ್ಟದಲ್ಲಿ ನಡೆಯುವ ಸಂಸ್ಕೃತ ಸ್ಪರ್ಧೆಗಳಲ್ಲಿ ಈ ಕಾಲೇಜಿನ ವಿದ್ಯಾರ್ಥಿಗಳು ಅತ್ಯಧಿಕ ಬಹುಮಾನ ಗಳಿಸಿದ್ದಾರೆ. ಇದಲ್ಲದೇ ಮೈಸೂರಿನಲ್ಲಿ ನಡೆಯುವ ಅಂತರಕಾಲೇಜು ವಿದ್ಯಾರ್ಥಿನಿಲಯ, ವಿಶ್ವವಿದ್ಯಾನಿಲಯಗಳ ಕನ್ನಡ ಚರ್ಚಾಸ್ಪರ್ಧೆ, ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿರುವುದು ಇಲ್ಲಿಯ ಶೈಕ್ಷಣಿಕ ಪರಿಸರದ ಬಗ್ಗೆ ಹೆಮ್ಮೆ ತರಿಸುತ್ತದೆ. ಪ್ರತಿ ವರ್ಷ ಅನೇಕ ಶೈಕ್ಷಣಿಕ ಚಟುವಟಿಕೆಗಳನ್ನು ಕಾಲೇಜು ವತಿಯಿಂದ ಮತ್ತು ವಿದ್ಯಾರ್ಥಿಗಳ ವತಿಯಿಂದ ನಡೆಸಿಕೊಂಡು ಬರಲಾಗುತ್ತಿದೆ.

**ಡಾ. ಕೆ.ಎಂ. ಮಹದೇವಯ್ಯ**
ಪ್ರಾಧ್ಯಾಪಕರು, ಶಕ್ತಿ ವಿಶಿಷ್ಟಾದ್ವೈತ ವೇದಾಂತ,
ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು,
ಮೈಸೂರು

**‘‘विद्याधनं सर्वधनप्रधानम्’’**
**ವಿದ್ಯಾಸಂಪತ್ತು ಎಲ್ಲ ಸಂಪತ್ತಿಗಿಂತಲೂ ಶ್ರೇಷ್ಠ.**

# ಅಪೂರ್ವ ಭಾಷಾಲೋಕದ ಅಭೂತಪೂರ್ವ ದರ್ಶನ

# ವಿಶ್ವ ಸಂಸ್ಕೃತ ಪುಸ್ತಕ ಮೇಳ

## ಜನವರಿ 7–10, 2011, ನ್ಯಾಷನಲ್ ಕಾಲೇಜ್ ಮೈದಾನ, ಬಸವನಗುಡಿ, ಬೆಂಗಳೂರು

**ಸಂಸ್ಕೃತ ಪುಸ್ತಕ ಮೇಳ ಏಕಾಗಿ?**

ಪ್ರಕಾಶನೋದ್ಯಮವು ಜನಜೀವನದ ನಾಡಿಯಿದ್ದಂತೆ. ಸಂಸ್ಕೃತ ಪ್ರಕಾಶನೋದ್ಯಮಕ್ಕೆ ಹೊಸ ಚೈತನ್ಯ ನೀಡುವುದೇ ಸಂಸ್ಕೃತ ಪುಸ್ತಕ ಮೇಳದ ಮುಖ್ಯ ಉದ್ದೇಶ. ಭಾರತದ ಪ್ರಮುಖ ಸಂಸ್ಕೃತ ಸಂಸ್ಥೆಗಳ ಸಾಮೂಹಿಕ ಪ್ರಯತ್ನದಿಂದ ಜರುಗಲಿರುವ ಈ ಪುಸ್ತಕ ಮೇಳ ಸಂಸ್ಕೃತದ ಸಮೃದ್ಧ ಜ್ಞಾನ ರಾಶಿಯನ್ನು ಪರಿಚಯಿಸುತ್ತ ಹೊಸ ಪರಿವರ್ತನೆಗೆ ನಾಂದಿ ಹಾಡಲಿದೆ. ಸಂಸ್ಕೃತ ಪುಸ್ತಕಗಳ ಮಾರಾಟವಷ್ಟೇ ಇದರ ಉದ್ದೇಶವಲ್ಲ. ಸಮೃದ್ಧ ವಿಶ್ವ ಸಂಸ್ಕೃತಿಯ ನೆಲೆಯಾದ ದೇವವಾಣಿಯ ವೈಭವೋತ್ಸವವೂ ಇದಾಗಲಿದೆ.

**ಪುಸ್ತಕ ಮೇಳದ ಉದ್ದೇಶಗಳು**

* ಆಧುನಿಕ ಸಂಸ್ಕೃತ ಸಾಹಿತ್ಯಕ್ಕೆ ಹೊಸ ದಿಕ್ಕು ಕೊಡುವುದು.
* ಸಂಸ್ಕೃತ ಪುಸ್ತಕ ಪ್ರಕಾಶಕರ ಮಾರುಕಟ್ಟೆಯನ್ನು ವಿಸ್ತರಿಸುವುದು.
* ಸಂಸ್ಕೃತ ಸೇವೆಯ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳಲು ಯುವ ಜನಾಂಗಕ್ಕೆ ಪ್ರೇರಣೆ ನೀಡುವುದು.
* ಸಂಸ್ಕೃತದ ಉನ್ನತಿಗಾಗಿ ಸಹಕರಿಸುವಲ್ಲಿ ಜನಜಾಗೃತಿ ಮೂಡಿಸುವುದು.

## ಪುಸ್ತಕ ಮೇಳ ಹಾಗೂ ವಿದ್ವತ್ ಸಮ್ಮೇಳನದ ಕಾರ್ಯಕ್ರಮಗಳ ಪಕ್ಷಿನೋಟ

| | | |
|---|---|---|
| 6.1.2011 | * ಸಂಜೆ 5.00 | "ಭಾರತೀಯ ಜ್ಞಾನ ಪರಂಪರೆ" ಎಂಬ ಪ್ರದರ್ಶಿನಿಯ ಉದ್ಘಾಟನೆ |
| | * ಸಂಜೆ 6.00–8.00 | ವಿದ್ವಾನ್ ವಿದ್ಯಾಭೂಷಣರಿಂದ "ಸಂಗೀತ ಕಾವೇರಿ" |
| 7.1.2011 | * ಬೆಳಿಗ್ಗೆ 10.30 | ಪುಸ್ತಕ ಮೇಳ ಹಾಗೂ ವಿದ್ವತ್ ಸಮ್ಮೇಳನದ ಉದ್ಘಾಟನೆ – ಹಲವು ಗಣ್ಯರ ಉಪಸ್ಥಿತಿಯಲ್ಲಿ |
| | * ಮಧ್ಯಾಹ್ನ 3.00 | ಮುನ್ನೂರಕ್ಕೂ ಹೆಚ್ಚು ಹೊಸ ಸಂಸ್ಕೃತ ಪುಸ್ತಕಗಳ ಲೋಕಾರ್ಪಣೆ – ಒಂದೇ ವೇದಿಕೆಯಲ್ಲಿ |
| | * ಸಂಜೆ 6.00–8.00 | ಶ್ರೀ ರಾಜೇಶ್ ಕೃಷ್ಣನ್‌ರವರಿಂದ "ಸಂಗೀತ ಸಂಧ್ಯಾ" |
| 8.1.2011 | * ಬೆಳಿಗ್ಗೆ 9.00ರಿಂದ ಸಂಜೆ 5.30 | ವಿವಿಧ ಗೋಷ್ಠಿಗಳು, ಚರ್ಚೆ, ಪರಿಸಂವಾದ, ವಿಚಾರಮಂಥನ ಮುಂತಾದವು |
| | * ಸಂಜೆ 6.00–8.00 | ಪದ್ಮಶ್ರೀ ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರಿಂದ "ಸಂಸ್ಕೃತ ರಸಮಂಜರಿ" |
| 9.1.2011 | * ಬೆಳಿಗ್ಗೆ 9ರಿಂದ ಮಧ್ಯಾಹ್ನ 1.00 | ಯುವ ಸಮಾವೇಶ, ಕವಿ ಸಮ್ಮೇಳನ, ಶಲಾಕಾ ಪರೀಕ್ಷೆ ಮುಂತಾದವು |
| | * ಮಧ್ಯಾಹ್ನ 4.00–6.00 | "ಸಂಸ್ಕೃತ ಸಂಗಮ" – ಸಾರ್ವಜನಿಕ ಕಾರ್ಯಕ್ರಮ |
| | * ಸಂಜೆ 6.30–8.00 | "ಧರ್ಮಭೂಮಿ" ನೃತ್ಯರೂಪಕ ಪ್ರಭಾತ ಕಲಾವಿದರಿಂದ |
| 10.1.2011 | * ಬೆಳಿಗ್ಗೆ 9.00ರಿಂದ ಸಂಜೆ 4.30 | ಅವಲೋಕನ ಗೋಷ್ಠಿ, ಅನುವರ್ತನೆಯ ಬಗ್ಗೆ ಚಿಂತನೆ ಮುಂತಾದವು |
| | * ಸಂಜೆ 5.30 | ಗಾನಕಲಾಭೂಷಣ ವಿದ್ವಾನ್ ಆರ್.ಕೆ. ಪದ್ಮನಾಭ ಅವರಿಂದ "ಸಂಸ್ಕೃತಗಾನ ಗೋಷ್ಠಿ" |

## 8, 9 ಜನವರಿ 2011 ಕುವೆಂಪು ಕಲಾಕ್ಷೇತ್ರದಲ್ಲಿ

ದೇಶದುದ್ದಗಲಕ್ಕೂ ಕಲೆ, ಸಂಸ್ಕೃತಿ, ಪರಂಪರೆಗಳು ಅನೇಕ ಬಗೆಯವಾಗಿದ್ದರೂ ಏಕತೆಯ ನೆಲೆಗಟ್ಟು ಗಟ್ಟಿಯಾಗಿದೆಯೆಂಬುದನ್ನು ಮನಗಾಣಿಸುವ ಹಲವು ಬಗೆಯ ಸಾಂಸ್ಕೃತಿಕ ಮನರಂಜನ ಕಾರ್ಯಕ್ರಮಗಳು.

* ಸಂಸ್ಕೃತದಲ್ಲಿ **ಯಕ್ಷಗಾನ** – ಶೃಂಗೇರಿಯ ತಂಡದಿಂದ
* ಶತಾವಧಾನಿ ಆರ್. ಗಣೇಶ್ ಹಾಗೂ ಶ್ರೀ ಬಿ.ಕೆ.ಎಸ್. ವರ್ಮಾ ಅವರಿಂದ **'ಕಾವ್ಯ–ಚಿತ್ರ'** ಕಾರ್ಯಕ್ರಮ.
* 'ಅಭಿನಯ ಭಾರತಿ'ಯಿಂದ ಸಂಸ್ಕೃತ ನಾಟಕದ **ಚಲನಚಿತ್ರ.**
* 'ಧಾತು' ಸಂಸ್ಥೆಯಿಂದ **ಗೊಂಬೆಯಾಟ**ದ ಪ್ರದರ್ಶನ

ಇದಲ್ಲದೇ **ಭರತನಾಟ್ಯ, ಗರಬಾ, ಬಿಹು, ಕಥಕ್, ಮಣಿಪುರೀನೃತ್ಯ** ಮುಂತಾದ ಹಲವು ಬಗೆಯ ಕಾರ್ಯಕ್ರಮಗಳು.

### ಯಾರೇನು ಪಡೆಯಬಹುದು?

**ಸಾರ್ವಜನಿಕರು**

* ಸಂಸ್ಕೃತ ಸಂಭಾಷಣೆ ಮತ್ತು ಅಧ್ಯಯನ ತುಂಬಾ ಸುಲಭ ಎಂಬ ಅನುಭವ.
* ಸಂಸ್ಕೃತಮಯ ವಾತಾವರಣದ ಆಸ್ವಾದನೆ.
* ತಾಳೇಗರಿಗಳಲ್ಲಿ ಹುದುಗಿರುವ ಅಪ್ರಕಾಶಿತ ಜ್ಞಾನರಾಶಿಯ ಅವಲೋಕನ.
* ಸಂಸ್ಕೃತದಲ್ಲಿ ಹೊಸದಾಗಿ ರಚಿತವಾದ ಕಥೆ, ಕಾದಂಬರಿ, ವಿವಿಧ ಸಾಹಿತ್ಯ, ಧ್ವನಿಮುದ್ರಿಕೆಗಳು ಮತ್ತು ಆಡಿಯೋ, ವಿಡಿಯೋ ಸಿ.ಡಿ.ಗಳ ಪರಿಚಯ ಮಾಡಿಕೊಳ್ಳಲು ಹಾಗೂ ಕೊಳ್ಳಲು ಸುವರ್ಣಾವಕಾಶ.

**ವಿದ್ಯಾರ್ಥಿಗಳು ಮತ್ತು ಸಂಸ್ಕೃತ ಬಲ್ಲವರು**

* ವಿದ್ವಾಂಸರ, ಹಿರಿಯರ ಮತ್ತು ಹೊಸಬರ ಸಂಪರ್ಕ ಹಾಗೂ ಸಹವಾಸ.
* ಸಂಶೋಧನೆಗಳ ಮಂಡನೆಯ ಮೂಲಕ ಬೇರೆಯವರಲ್ಲಿ ಕುತೂಹಲ ಮೂಡಿಸುವುದು ಹಾಗೂ ಜಿಜ್ಞಾಸೆಯ ಪರಿಹಾರ.
* ತಮ್ಮ ಗ್ರಂಥದ ಲೋಕಾರ್ಪಣೆಯಿಂದ ಪ್ರಸಿದ್ಧಿ ಮತ್ತು ಗೌರವ.
* ಶೈಕ್ಷಣಿಕ ಪ್ರವಾಸದ ರೂಪದಲ್ಲಿ ಮೇಳಕ್ಕೆ ಬಂದು ಆನಂದದ ಅನುಭವ.

**ಸಂಸ್ಥೆಗಳ ಪ್ರಮುಖರು**

* ತಮ್ಮ ಹೊಸತನ ಮತ್ತು ವೈಶಿಷ್ಟ್ಯಗಳ ಪ್ರದರ್ಶನಕ್ಕೆ ಅವಕಾಶ.
* ಗ್ರಂಥ ಪ್ರಕಾಶನಕ್ಕಾಗಿ ಪ್ರಕಾಶಕರ ಪ್ರಾಪ್ತಿ.
* ಹೊಸ ವಿದ್ಯಾರ್ಥಿ, ಅಧ್ಯಾಪಕರುಗಳಲ್ಲಿ ಪ್ರಭಾವ ಮೂಡಿಸಲು ಅವಕಾಶ.

**ಗ್ರಂಥ ಪ್ರಕಾಶಕರು**

* ಯೋಗ್ಯ ಗ್ರಾಹಕರ ಉಪಲಬ್ಧಿ.
* ಬೇರೆ ಬೇರೆ ಪ್ರಕಾಶಕರ ಮತ್ತು ಮಾರಾಟಗಾರರ ಪರಿಚಯ.
* ಕಾರ್ಯಕ್ರಮದ ಪ್ರಾಯೋಜನೆಯಿಂದ ಪ್ರಸಿದ್ಧಿ.

### ಪುಸ್ತಕ ಮೇಳದ ಹೂರಣ

**ಪುಸ್ತಕ ಲೋಕ...**

* ದೇಶ–ವಿದೇಶಗಳ ಸುಮಾರು 100ಕ್ಕೂ ಹೆಚ್ಚು ಪುಸ್ತಕ ಪ್ರಕಾಶಕರ ಸಂಗಮ.
* ಸುಮಾರು 500ಕ್ಕೂ ಹೆಚ್ಚು ಪುಸ್ತಕಗಳ ಲೋಕಾರ್ಪಣೆ.
* ಪುಸ್ತಕ ಪರಿಷೆ.
  (ಮನೆಯಲ್ಲಿರುವ ನಿಮಗೆ ಉಪಯೋಗವಿಲ್ಲದ ಪ್ರಾಚೀನ ಸಂಸ್ಕೃತ ಪುಸ್ತಕಗಳನ್ನು ನೀಡಿ ಯಾವುದಾದರೊಂದು ಪುಸ್ತಕವನ್ನು ಉಚಿತವಾಗಿ ಪಡೆಯಬಹುದು.)
* ಗ್ರಂಥಕಾರರ ಒಡ್ಡೋಲಗ – ಗ್ರಂಥಕಾರರಿಂದ ಗ್ರಂಥಗಳ ಅವಲೋಕನ.

**ಪ್ರದರ್ಶಿನೀ**

* ಭಾರತದ ಪ್ರಾಚೀನ ಜ್ಞಾನ ಪರಂಪರೆಯ ವಿವಿಧ ಮುಖಗಳ ವಿಹಂಗಮ ನೋಟ.
* ತಾಳೆಗರಿ ಸಂಪತ್ತಿನ ಸ್ಥೂಲ ಪರಿಚಯ.
* ಸಂಸ್ಕೃತ ವಿಶ್ವವಿದ್ಯಾಲಯಗಳು ರಾಷ್ಟ್ರೀಯ ತಾಳೇಗರಿ ಸಂರಕ್ಷಣ ಪ್ರತಿಷ್ಠಾನ ಹಾಗೂ ಇತರ ಸಂಸ್ಕೃತಾನುರಾಗಿ ಸಂಸ್ಥೆಗಳ ಕಾರ್ಯಚಟುವಟಿಕೆಯ ಪರಿಚಯ.
* ಸಂಸ್ಕೃತ ಮಾರುಕಟ್ಟೆಯ ಪ್ರತ್ಯಕ್ಷ ದರ್ಶನ.
* ಭಾರತೀಯ ತಂತ್ರಜ್ಞಾನದ ಉಪಯುಕ್ತ ಪ್ರಾರೂಪಗಳು.
* ಸಂಸ್ಕೃತ ಗ್ರಾಮದ ಪ್ರತ್ಯಕ್ಷ ದರ್ಶನ.
* ದೃಶ್ಯ ಹಾಗೂ ಶ್ರವ್ಯ ಮಾಧ್ಯಮಗಳ ಮೂಲಕ ಸಂಸ್ಕೃತ ಭಾಷೆಯ ವಿವಿಧ ಆಯಾಮಗಳ ದರ್ಶನ.

**ಸಭೆ, ಕಾರ್ಯಾಗಾರಗಳು...**

* ಪಂಡಿತ ಪರಿಷತ್–ಶಾಸ್ತ್ರವಿಚಾರಗಳ ಕುರಿತಾಗಿ ಚರ್ಚೆ.
* ಅನುವಾದ, ಹೊಸ ಶಬ್ದಗಳ ಸೃಷ್ಟಿ, ಸಂಸ್ಕೃತದ ಪ್ರಸ್ತುತತೆ ಮುಂತಾದವುಗಳ ಬಗ್ಗೆ ವಿಚಾರ ಮಂಥನ.
* ಶಲಾಕಾ ಪರೀಕ್ಷೆ

**ಮನೋರಂಜನೆ...**

* ನಾಟಕೋತ್ಸವ, ಸಂಸ್ಕೃತ ಸಂಗೀತ ಕಾರಂಜಿ
* ನೃತ್ಯ, ಗಾನ, ಅವಧಾನ ಮುಂತಾದ ಕಾರ್ಯಕ್ರಮಗಳು.

❑

# ಬೋಧನೆಯ ಜೊತೆಗೆ ಸಂಶೋಧನೆಗೆ ಆದ್ಯತೆ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಕನ್ನಡ ಸಾಂಸ್ಕೃತಿಕ ಜಗತ್ತಿನ ಕೆಲವು ಹಿರಿಯರು ಹಾಗೂ ಪ್ರಜ್ಞಾವಂತರ ಪ್ರತಿರೋಧದ ನಡುವೆಯೂ ರೂಪುಗೊಂಡ 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ'ದ ಪ್ರಥಮ ಕುಲಪತಿಗಳಾಗಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ನೇಮಕವಾಗಿದೆ. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿ ದುಡಿದ ಅನುಭವಿ ಅವರು. ಇನ್ನೂ ಕನಸುಗಳ ಹಂತದಲ್ಲಿರುವ ಸಂಸ್ಕೃತ ವಿ.ವಿ. ಉದ್ದೇಶಗಳು ಹಾಗೂ ಚಟುವಟಿಕೆಗಳ ಬಗ್ಗೆ ಅವರು 'ಪ್ರಜಾವಾಣಿ'ಯೊಂದಿಗೆ ಆಡಿದ ಮಾತುಗಳ ಸಂಗ್ರಹ ಇಲ್ಲಿದೆ.**

*** ಹೊಸ ವಿಶ್ವವಿದ್ಯಾಲಯದ ಸ್ವರೂಪ ಯಾವ ರೀತಿಯದು?**

ಭೌತಿಕ ಸ್ವರೂಪ ಇನ್ನೂ ಸ್ಪಷ್ಟವಾಗಬೇಕಿದೆ. ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಸೂರಪ್ಪನಹಳ್ಳಿಯಲ್ಲಿ ಭೂಮಿಯನ್ನು ಗುರ್ತಿಸಲಾಗಿದೆ. ಪ್ರಸ್ತುತ, ಬೆಂಗಳೂರಿನ ಚಾಮರಾಜ ಪೇಟೆಯಲ್ಲಿರುವ ಕಚೇರಿಯನ್ನು ಕುಲಪತಿಗಳ ಕೇಂದ್ರ ಕಚೇರಿಯನ್ನಾಗಿ ಉಳಿಸಿಕೊಳ್ಳುವ ಚಿಂತನೆಯಿದೆ. ಆಡಳಿತಾತ್ಮಕವಾಗಿ, ವಿಶ್ವವಿದ್ಯಾಲಯದ ಚಟುವಟಿಕೆಗಳ ಹಿನ್ನೆಲೆಯಲ್ಲಿ ನಿಯಮಗಳನ್ನು ರೂಪಿಸುವ ಪ್ರಯತ್ನಗಳು ಸಾಗಿವೆ. ರಾಜ್ಯ, ಕೇಂದ್ರ ಹಾಗೂ ಡೀಮ್ಡ್ ವಿ.ವಿ.ಗಳು ಸೇರಿದಂತೆ ದೇಶದಲ್ಲಿ ಒಟ್ಟು ಹದಿನಾಲ್ಕು ಸಂಸ್ಕೃತ ವಿಶ್ವವಿದ್ಯಾಲಯುಗಳಿದ್ದು, ಅವುಗಳ ಚಟುವಟಿಕೆಗೆ ಸಂಬಂಧಿಸಿದ ಸಂವಿಧಾನವನ್ನು ಅಧ್ಯಯನ ಮಾಡಲಾಗಿದೆ. ಕರ್ನಾಟಕ, ಕನ್ನಡ ಸಂಸ್ಕೃತಿ, ಕನ್ನಡ ನುಡಿ ಹಾಗೂ ಅದರ ಸೋದರ ಭಾಷೆಗಳು –ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ತಾರ್ಕಿಕ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ'ದ ಕರಡು ಪ್ರತಿಗಳು ತಯಾರಾಗಿವೆ. ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಆಗಿರುವ ಕೆಲಸಗಳಿವು.

*** ವಿವಿ ಉದ್ದೇಶಗಳನ್ನು ಸರಳವಾಗಿ ಹೇಗೆ ಹೇಳಬಹುದು?**

ಸಂಸ್ಕೃತಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಹದಿನಾಲ್ಕು ಕಾಲೇಜು ಹಾಗೂ ಇನ್ನೂರ ಮೂವತ್ತು ಪಾಠಶಾಲೆಗಳಿವೆ. ಇವು ಸಾಂಪ್ರದಾಯಿಕ ಶಿಕ್ಷಣ ನೀಡುತ್ತಿವೆ. ಇನ್ನು ಮುಂದೆ ಇವೆಲ್ಲವೂ ವಿ.ವಿ. ವ್ಯಾಪ್ತಿಗೆ ಒಳಪಡುತ್ತವೆ. ಇಲ್ಲಿ ಆಗಬೇಕಾದುದು ಮೂರು ರೀತಿಯ ಕೆಲಸ. ವ್ಯವಸ್ಥಾಪೀಕರಣ, ಸಬಲೀಕರಣ ಹಾಗೂ ಸಮಗ್ರೀಕರಣ. ಇದನ್ನು ಆರ್ಥಿಕ, ಸಾಂಸ್ಥಿಕ, ಬೌದ್ಧಿಕ ಪ್ರಕ್ರಿಯೆ ಎಂದೂ ಕರೆಯಬಹುದು. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯ ಕಾರ್ಯನಿರ್ವಹಿಸಲಿದೆ. ಮತ್ತೊಂದು ಮುಖ್ಯ ಉದ್ದೇಶ, ಪ್ರಾಚೀನ ಜ್ಞಾನಕ್ಕಿರುವ ಅನಂತ ಸಾಧ್ಯತೆಗಳನ್ನು ಆಧುನಿಕ ಜ್ಞಾನ ಶಾಖೆಗಳೊಂದಿಗೆ ಬೆಸೆಯುವುದು. ಈ ಕೆಲಸ ವಿಜ್ಞಾನ, ವಿಚಾರ ಸೇರಿದಂತೆ ಬಹುಮುಖಿ. ಪ್ರಸ್ತುತ ಬೌದ್ಧ, ಜೈನ ತತ್ತ್ವಶಾಸ್ತ್ರಗಳನ್ನು ಇಂಗ್ಲಿಷ್ ಮೂಲಕ ಗ್ರಹಿಸಲಾಗುತ್ತಿದೆ. ಈ ಗ್ರಹಿಕೆ ಪಾಲಿ, ಪ್ರಾಕೃತ, ಅರ್ಧಮಾಗಧಿಗಳ ಮೂಲಕವೂ ನಡೆಯಬೇಕು. ಏಕೆಂದರೆ, ಸಾಂಪ್ರದಾಯಿಕ ಜ್ಞಾನದ ಹಿಂದೆ ಬೃಹತ್ತಾದ ತಾತ್ತ್ವಿಕ ಜಗತ್ತಿದೆ. ಹಾಗಾಗಿ, ಮೂಲಭಾಷೆಯ ಮೂಲಕ ಗ್ರಹಿಸುವುದು ಹೆಚ್ಚು ಅರ್ಥವತ್ತಾಗಿರುತ್ತದೆ. ಕಾಳಿದಾಸ ಪ್ರತಿಪಾದಿಸಿದ 'ಹೊಸತು ಹಳತರ ಸಾಮರಸ್ಯ ಸಾಧಿಸುವ ವಿವೇಕದ ಹಾದಿ'ಯಲ್ಲಿ ನನ್ನ ನಂಬಿಕೆ.

ಜ್ಞಾನದ ಅನಂತ ಸಾಧ್ಯತೆಗಳ ಹುಡುಕಾಟ ಹಾಗೂ ಅವುಗಳ ಅನಾವರಣ ವಿ.ವಿ.ಯ ಮತ್ತೊಂದು ಮುಖ್ಯ ಉದ್ದೇಶ. ಈ ನಿಟ್ಟಿನಲ್ಲಿ ಅಂತರ್‌ಶಿಸ್ತೀಯ ಅಧ್ಯಯನ ಹಾಗೂ ತೌಲನಿಕ ಅಧ್ಯಯನಕ್ಕೆ ಒತ್ತು ನೀಡಲಾಗುತ್ತದೆ.

*** ಕನ್ನಡದ ಹಿತಾಸಕ್ತಿಗೆ ಸಂಸ್ಕೃತ ವಿ.ವಿ. ಹೇಗೆ ಪೂರಕ?**

ಪ್ರಸ್ತುತ ಜಾಗತೀಕರಣಕ್ಕೆ ಪ್ರತಿರೋಧದ ರೂಪವಾಗಿ ದೇಸಿ ಪರಂಪರೆಯನ್ನು ಬಿಂಬಿಸುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಕನ್ನಡವನ್ನು ತಿಳಿಯುವ ಕ್ರಮ ಬದಲಾಗಬೇಕು. ಉದಾಹರಣೆಗೆ ಪಂಪನನ್ನು ತೆಗೆದುಕೊಳ್ಳಿ. ಕೇವಲ ಕನ್ನಡದ ಕಣ್ಣಿನಿಂದಷ್ಟೇ ಪಂಪನನ್ನು ನೋಡಲು ಸಾಧ್ಯವಿಲ್ಲ. ಪ್ರಾಕೃತದ ನೆಲೆಯಿಂದ ಹಾಗೂ ಆ ಕಾಲದ ಸಾಂಸ್ಕೃತಿಕ ಉಪಧಾರೆಗಳ ಮೂಲಕ ನೋಡಿದಾಗ ಪಂಪ ಹೆಚ್ಚು ಅರ್ಥವಾಗುತ್ತಾನೆ. ಪಂಪ ಅರ್ಥವಾದಾಗ ಕುವೆಂಪು ಇನ್ನೂ ಹೆಚ್ಚು ಸ್ಪಷ್ಟವಾಗುತ್ತಾರೆ. ಅಂತೆಯೇ, ಉಪನಿಷತ್ತಿನ ಧಾರೆಗಳ ತಿಳವಳಿಕೆಯಿಂದ ವಚನಗಳು, ಭಾಗವತದ ತಾತ್ತ್ವಿಕ ಜಗತ್ತಿನ ಮೂಲಕ ದಾಸ ಸಾಹಿತ್ಯ ಹೆಚ್ಚು ಸ್ಪಷ್ಟವಾಗುತ್ತದೆ. ಸಂಸ್ಕೃತ ಹಾಗೂ ಪ್ರಾಕೃತ ಜಗತ್ತಿನ ಜೊತೆಗೆ ಕನ್ನಡದ ಜಗತ್ತನ್ನು ಒಟ್ಟುಗೂಡಿಸುವ ಪ್ರಯತ್ನ ವಿಶ್ವವಿದ್ಯಾಲಯದ್ದು. ಕನ್ನಡವನ್ನು ಕಟ್ಟುವ ಕೆಲಸದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಒಂದು ರೀತಿಯ ಕೆಲಸವನ್ನು ಮಾಡುತ್ತಿದೆ. ಇದೇ ಕೆಲಸವನ್ನು ಸಂಸ್ಕೃತ ವಿ.ವಿ. ಮತ್ತೊಂದು ರೂಪದಲ್ಲಿ ಸಾಧಿಸುತ್ತದೆ. ಕನ್ನಡ ಹಾಗೂ ಸಂಸ್ಕೃತ ವಿ.ವಿ.ಗಳು ಜೊತೆ ಜೊತೆ ನಡೆಯುವುದರಿಂದ ಕನ್ನಡಕ್ಕೆ ಹೆಚ್ಚು ಉಪಯೋಗ.

*** ಹಾಗಾದರೆ, ಸಂಸ್ಕೃತ ವಿ.ವಿ.ಯಿಂದ ಕನ್ನಡಕ್ಕೆ ಆತಂಕವಿದೆ ಎನ್ನುವುದು ಸುಳ್ಳಾ?**

ಸಂಸ್ಕೃತವನ್ನು ಕನ್ನಡ ವಿರೋಧಿ ಎಂದು ಭಾವಿಸದೆ ಎರಡರ ನಡುವಣ ಸಂಬಂಧವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕಿದೆ. ಈಗ ಏಕಾಕಾರದ ಕನ್ನಡ ಗ್ರಹಿಕೆಯ ಹಂತಗಳಲ್ಲಿದ್ದೇವೆ. ಅದರ ಅಪಾಯಗಳನ್ನು ಮುಂದೆ ಅನುಭವಿಸಬೇಕಾಗಬಹುದು. ಕನ್ನಡವನ್ನು ನೋಡುವ ಕ್ರಮವೇ ಬದಲಾಗಬೇಕಿದೆ. ಭಾಷಾಶಾಸ್ತ್ರದ ಕಣ್ಣಿಂದ ಮಾತ್ರವಲ್ಲದೆ, ತಾತ್ತ್ವಿಕ ಜಗತ್ತಿನ ದರ್ಶನದ ಹಂಬಲದಿಂದ ನೋಡಿದಾಗ ಸಂಸ್ಕೃತದ ಅನುಸಂಧಾನದ ಕ್ರಮ ಅರ್ಥವಾಗುತ್ತದೆ. ಸಂಸ್ಕೃತದಿಂದ ಕನ್ನಡಕ್ಕೆ ಅಪಾಯವೆಂದು ಯೋಚಿಸಬೇಕಾಗಿಲ್ಲ.

ಇಪ್ಪತ್ತೊಂದನೇ ಶತಮಾನದ ಕನ್ನಡ ಎದುರಿಸುತ್ತಿರುವ ಸವಾಲುಗಳ ಹಿನ್ನೆಲೆಯಲ್ಲಿ, ಕನ್ನಡದ ರೂಪಕ ಜಗತ್ತಿಗೆ ಹೊಸ ಆಕಾರವನ್ನು ಸಂಸ್ಕೃತದ ಪ್ರತಿಮಾರೂಪಗಳು ನೀಡಬಲ್ಲವು. ಇದನ್ನು ಕುವೆಂಪು, ಬೇಂದ್ರೆ ಹಾಗೂ ಪುತಿನ ಬೇರೆ ಬೇರೆ ರೂಪದಲ್ಲಿ ತೋರಿಸಿಕೊಟ್ಟಿದ್ದಾರೆ. ಕಂಬಾರರು ಕೂಡ ಇದನ್ನು ಮಾಡಿದ್ದಾರೆ, ತಮಗೆ ಗೊತ್ತಿಲ್ಲದೆಯೇ. ಕನ್ನಡದ ವಿದ್ವತ್ ಪರಂಪರೆಗೆ ಇನ್ನಷ್ಟು ಹೊಸಮುಖಗಳಿವೆ ಎನ್ನುವುದು ನವೋದಯದವರಿಗೆ ಗೊತ್ತಿತ್ತು.

*** ಸಂಸ್ಕೃತ ತರತಮಗಳ ಭಾಷೆ ಎನ್ನುವುದು ಕಂಬಾರರ ಅಭಿಪ್ರಾಯ...**

ರೂಢಮೂಲ ಸಿದ್ಧಾಂತಗಳ ಜೊತೆ ಅವರು ಮಾತನಾಡಿರಬಹುದು. ಈ ಹೊತ್ತೂ ಅವುಗಳನ್ನು ಅನ್ವಯಿಸಿಕೊಂಡು ಮುಂದುವರೆಯಲು ಸಾಧ್ಯವಿಲ್ಲ. ಜ್ಞಾನ ಸಕಾರಾತ್ಮಕವೂ ಹೌದು ನಕಾರಾತ್ಮಕವೂ ಹೌದು. ತರತಮ, ಭಿನ್ನತೆ ಎನ್ನುವುದೆಲ್ಲ ಹೊರಕವಚಗಳ ಯೋಚನೆ. ಒಳಕವಚಗಳಲ್ಲಿ ಅಂಥ ಸಾಧ್ಯತೆಗಳಿಲ್ಲ. ಸಂಸ್ಕೃತದ ಗ್ರಹಿಕೆಯ ಕ್ರಮವನ್ನೂ ನಾವು ಬದಲಿಸಿಕೊಳ್ಳಬೇಕಾಗಿದೆ.

ಸಂಸ್ಕೃತವನ್ನು ಬ್ರಾಹ್ಮಣರ ಭಾಷೆ ಎನ್ನುತ್ತಿದ್ದೇವೆ. ಅದರ ಬಗ್ಗೆ ವರ್ಣೀಕೃತ ನೆಲೆಯಲ್ಲಿ ಯೋಚಿಸುತ್ತಿದ್ದೇವೆ. ಇಂಥ ಯೋಚನೆಗಳಿಗೆ ಸಂಸ್ಕೃತದೊಳಗೆ ಅವಕಾಶವಿಲ್ಲ. 'ಅಧಿಕಕನ್ನಡಂಗಳ' ರೀತಿಯಲ್ಲಿ ಸಂಸ್ಕೃತಗಳೂ ಹಲವಿವೆ. ಪಾಲಿ, ಪ್ರಾಕೃತ –ಇವೆಲ್ಲ ಸಂಸ್ಕೃತದ ಇನ್ನೊಂದು ಬಗೆ. ಸಂಸ್ಕೃತ ನಾಟಕಗಳಲ್ಲಿ ಬರುವ ಅರ್ಧ ಮಾಗಧಿ, ಜಗತ್ತಿನ ಅನಂತ ಸಾಧ್ಯತೆಗಳ ಬಗ್ಗೆ ಮಾತನಾಡುವ ಒಂದು ವಿಧಾನ. ಸಂಸ್ಕೃತ ನಾಟಕಗಳಲ್ಲಿ ಹತ್ತಾರು ರೂಪದ ಸಂಸ್ಕೃತ ಛಾಯೆಗಳಿವೆ. ಶಂಕರಮೊಕಾಶಿ ಪುಣೇಕರರೂ ಇದನ್ನೇ ಹೇಳಿದ್ದಾರೆ.

*** ಸಂಸ್ಕೃತ ವಿ.ವಿ. ಕೇಸರೀಕರಣದ ಒಂದು ಭಾಗ ಎನ್ನುವ ಮಾತುಗಳಿವೆ...**

ಈ ರೀತಿ ಯೋಚಿಸಲು ನನಗೆ ಸಾಧ್ಯವಿಲ್ಲ. ನಂನಮ್ಮ ನೆಲೆಗಟ್ಟುಗಳ ಹೊರಗೆ ನಿಂತು ಮುಕ್ತವಾಗಿ ಯೋಚಿಸಬೇಕು. ಸಂಸ್ಕೃತವನ್ನು ಧರ್ಮ, ಜಾತೀಯತೆ ಅಥವಾ ರಾಜಕೀಯದ ಚೌಕಟ್ಟಿನಲ್ಲಿಟ್ಟು ನೋಡಲು ಸಾಧ್ಯವಿಲ್ಲ.

*** ಇತರ ಸಂಸ್ಕೃತ ವಿಶ್ವವಿದ್ಯಾಲಯಗಳಿಗಿಂತ ರಾಜ್ಯದ ವಿ.ವಿ. ಹೇಗೆ ಭಿನ್ನ?**

ಬೇರೆ ಯೂನಿವರ್ಸಿಟಿಗಳು ಪಠ್ಯೀಕೃತ ನೆಲೆಯಲ್ಲಿ ಕೆಲಸ ಮಾಡುತ್ತಿವೆ. ಅವು ತುಂಬಾ ಹಳತು. ಅವನ್ನು ದಾಟುವುದು ನಮ್ಮ ಕ್ರಮ. ಬೇರೆ ವಿಶ್ವವಿದ್ಯಾಲಯಗಳು ಬೋಧನೆಗೆ ಪ್ರಾಮುಖ್ಯತೆ ನೀಡುತ್ತವೆ. ನಮ್ಮ ವಿಶ್ವವಿದ್ಯಾಲಯದ ಪ್ರಮುಖ ಉದ್ದೇಶ ಬೋಧನೆಯಲ್ಲ. ಸಂಶೋಧನೆ, ಅಧ್ಯಯನ ಇಲ್ಲಿನ ಪ್ರಮುಖ ಚಟುವಟಿಕೆ. ಇವುಗಳ ಫಲಗಳನ್ನು ಅರ್ಥ ಮಾಡಿಕೊಳ್ಳುವ ಕ್ರಮವಾಗಿ ಬೋಧನೆ ಇರುತ್ತದಷ್ಟೇ. ದೇಶದಲ್ಲೇ ಇದೊಂದು ಅನನ್ಯ ವಿಶ್ವವಿದ್ಯಾಲಯ. ಇದು ಕರ್ನಾಟಕಕ್ಕೆ ಮಾತ್ರವಲ್ಲ, ಭಾರತಕ್ಕೆ –ತನ್ಮೂಲಕ ಜಗತ್ತಿಗೆ.

*** ಕುಲಪತಿಗಳಾಗಿ ಸದ್ಯಕ್ಕೆ ನಿಮ್ಮೆದುರಿನ ಸವಾಲುಗಳು?**

ಕನ್ನಡ ಮತ್ತು ಸಂಸ್ಕೃತದ ನಡುವಣ ಸಾಂಸ್ಕೃತಿಕ ದೀಪಿಕೆಗಳ ಶೋಧ ಮುಖ್ಯ ಗುರಿ. ಕಾವ್ಯಗಳ ಮೂಲಕ, ಶಾಸನಗಳು ಹಾಗೂ ವಿದೇಶಿ ಬರಹಗಾರರ ಸಾಹಿತ್ಯದ ಮೂಲಕ ಇತಿಹಾಸವನ್ನು ಕಟ್ಟುವುದು ಜನಪ್ರಿಯ ಕ್ರಮ. ಈ ಚರಿತ್ರೆಯ ಅಧ್ಯಯನ ಸಂಸ್ಕೃತದ ಮೂಲಕವೂ ಆಗಬೇಕಿದೆ. ಹೀಗಾದಾಗ ಕನ್ನಡ ಸಂಸ್ಕೃತಿ ಅಧ್ಯಯನಕ್ಕೆ ಹೊಸ ವಿನ್ಯಾಸ ದೊರೆಯಲಿದೆ.

ವರ್ತಮಾನವನ್ನು ಅರ್ಥ ಮಾಡಿಕೊಳ್ಳುವುದು ಎಂದರೆ, ಪೂರ್ವವನ್ನು ನಮ್ಮೊಡನಿಟ್ಟುಕೊಂಡು ಇಂದು–ನಾಳೆಯನ್ನು ಕಟ್ಟುವುದು. ಈ ಕಟ್ಟುವ ಪ್ರಕ್ರಿಯೆಯಲ್ಲಿ ಸಂಸ್ಕೃತವನ್ನು ಪಕ್ಕಕ್ಕಿಡಲು ಸಾಧ್ಯವಿಲ್ಲ. ಪಕ್ಕಕ್ಕಿಟ್ಟರೆ ನಮಗೆ ಕಾಣಿಸುವುದು ಪಾರ್ಶ್ವನೋಟ ಮಾತ್ರ.

*** ಸಂಸ್ಕೃತ ವಿ.ವಿ. ನಾಳೆಗಳು ಹೇಗಿರುತ್ತವೆ?**

ವಿಶ್ವವಿದ್ಯಾಲಯಗಳ ಸಂಕ್ಷಿಪ್ತೀಕರಣದ ಚೌಕಟ್ಟು ದಾಟಿ ಕೆಲಸ ಮಾಡುವುದು ನಮ್ಮ ಉದ್ದೇಶ. ಅಂಥ ಬಹುರೂಪಿ ಚಟುವಟಿಕೆಗಳು ಹೆಚ್ಚಿದಷ್ಟೂ ಗಾಳಿ ಬೆಳಕೂ ಹೆಚ್ಚುತ್ತದೆ. ಈ ರಹಸ್ಯವನ್ನು ಮೊದಲಿನಿಂದ ಕನ್ನಡವೂ ತಿಳಿದುಕೊಂಡಿದೆ. ಸಂಸ್ಕೃತವೂ ತಿಳಿದುಕೊಂಡಿದೆ.

**ಸೌಜನ್ಯ: ಪ್ರಜಾವಾಣಿ** **❑ ರಘುನಾಥ ಚ.ಹ.**

# ವಿದೇಶಗಳಲ್ಲಿ ಸಂಸ್ಕೃತದ ಅಧ್ಯಯನ: ಒಂದು ಮಾಹಿತಿ

* ವಿದೇಶಗಳಲ್ಲಿ ಎರಡು ರೀತಿಯಲ್ಲಿ ಸಂಸ್ಕೃತ ಅಧ್ಯಯನ ನಡೆಯುತ್ತಿದೆ.
  1. ವಿಶ್ವವಿದ್ಯಾಲಯ ಸ್ತರದಲ್ಲಿ
  2. ಸಾಮಾಜಿಕ ವಲಯದಲ್ಲಿ

  ವಿಶ್ವವಿದ್ಯಾಲಯಗಳಲ್ಲಿ ಪ್ರತ್ಯೇಕವಾಗಿ ಸಂಸ್ಕೃತ ವಿಭಾಗ ಇರುವುದಿಲ್ಲ. ಆದರೂ ಸಂಸ್ಕೃತ ಅಧ್ಯಯನ ನಡೆಯುತ್ತಿದೆ. ಅಲ್ಲಿಯ ಜನರು ಭಾರತೀಯೇತರರು ಸಾಮಾನ್ಯವಾಗಿ ಧರ್ಮಗ್ರಂಥಕ್ಕೆ (Religious) ಸಂಬಂಧಪಟ್ಟಂತೆ, ತತ್ತ್ವಜ್ಞಾನಕ್ಕೆ ಸಂಬಂಧಿಸಿದ (Philosophy), ಭಾಷೆಗೆ ಸಂಬಂಧಿಸಿದ (Lingustics) ಭಾರತಕ್ಕೆ ಸಂಬಂಧಿಸಿದ (Indology) ವಿಷಯಗಳ ಅಧ್ಯಯನಕ್ಕಾಗಿ ಸಂಸ್ಕೃತವನ್ನು ಅಧ್ಯಯನ ಮಾಡುತ್ತಾರೆ.
* ವಿದ್ಯಾಲಯ ಸ್ತರದಲ್ಲಿ ಸಂಸ್ಕೃತ ಅಧ್ಯಯನ ಇರುವುದಿಲ್ಲ. ಇದರಿಂದ ಹೊರತಾಗಿ ಸಾಮಾಜಿಕ ವಲಯದಲ್ಲಿ (Volunteer Sector) ಸ್ವಇಚ್ಛೆಯಿಂದ ಸಂಸ್ಕೃತ ಓದುವವರು ಇದ್ದಾರೆ. ಈ ರೀತಿಯಾಗಿ ಅಧ್ಯಯನ ಮಾಡುವವರು ಯೋಗ-ಆಯುರ್ವೇದ-ವೇದಾಂತ ಇತ್ಯಾದಿ ತರಗತಿಗಳಲ್ಲಿ ಸಂಸ್ಕೃತದ ಅಧ್ಯಯನ ಮಾಡುತ್ತಾರೆ.
* ವಿದೇಶದಲ್ಲಿ 700 ಹಿಂದೂ ಮಂದಿರಗಳಿವೆ. ಆ ಮಂದಿರಗಳಲ್ಲಿ ಸಂಸ್ಕೃತ, ಸಂಗೀತ ಭರತನಾಟ್ಯ ತರಗತಿಗಳು ನಡೆಯುತ್ತವೆ.
* ಈಗ ಬಹಳಷ್ಟು ಅನಿವಾಸಿ ಭಾರತೀಯರು ತಮ್ಮ ಮಕ್ಕಳಿಗೆ ಭಾರತೀಯ ಸಂಸ್ಕೃತಿಯನ್ನು ತಿಳಿಸಿಕೊಡಲು, ಸಾಂಸ್ಕೃತಿಕ-ಧಾರ್ಮಿಕ ವಿಷಯಗಳನ್ನು ಮನನ ಮಾಡಿಕೊಡಲು, ಸ್ತೋತ್ರಾದಿಗಳನ್ನು ಅರ್ಥ ಮಾಡಿಸಲು ಸಂಸ್ಕೃತದ ಪಾಠವನ್ನು ಆರಂಭಿಸಿದ್ದಾರೆ.
* ಇನ್ನೂ ಕೆಲವರು ಅಂತರ್ಜಾಲದ (Internet) ಮೂಲಕ ದೂರ ಶಿಕ್ಷಣದ (Distance Education) ಮೂಲಕ ಸಂಸ್ಕೃತದ ಅಧ್ಯಯನ ಮಾಡುತ್ತಿದ್ದಾರೆ.
* ಇನ್ನು ಕೆಲವರು ಭಾರತೀಯ ಗುರುಗಳ ಮೂಲಕವೇ ಸಂಸ್ಕೃತದ ಅಧ್ಯಯನಕ್ಕೆ ಅಣಿಯಾಗುತ್ತಿದ್ದಾರೆ.
* ಪ್ರಕಾರ ಬೇರೆ ಆದರೂ ಎಲ್ಲರ ಗುರಿ ಸಂಸ್ಕೃತ ಅಧ್ಯಯನ ಮಾಡುವುದೇ ಆಗಿದೆ.
* 'ಸಂಸ್ಕೃತ ಭಾರತಿ'ಯು ಶಾಖೆ ವಿದೇಶಗಳಲ್ಲಿ ಮಾಡುತ್ತಿರುವ ಸಂಸ್ಕೃತ ಪ್ರಚಾರ ಕಾರ್ಯ ಶ್ಲಾಘನೀಯ.
* ವಿದೇಶ ಭಾಷೆಯಾಗಿ ಸಂಸ್ಕೃತಾಧ್ಯಯನ (Samskrit as Foreign Language) ಎಂಬ ನೂತನ ಪಾಠ್ಯಕ್ರಮವನ್ನು ಅಳವಡಿಸಲಾಗಿದೆ. ಇದು ಮೂರು ವರ್ಷ ಅವಧಿಯ ಪಾಠ್ಯಕ್ರಮ. ಇದರಲ್ಲಿ 8ನೇ ತರಗತಿ ಮತ್ತು ಅದರಿಂದ ಮೇಲ್ಪಟ್ಟವರು ಪ್ರವೇಶಾರ್ಹರು.
* ಸಂಸ್ಕೃತ ಸಂಭಾಷಣ ಶಿಬಿರಗಳನ್ನು ಹತ್ತು ದಿನ ನಿರಂತರವಾಗಿ, ಅಥವಾ ವಾರಾಂತ್ಯದಲ್ಲಿ (Weekend) ನಡೆಸುತ್ತಿದ್ದಾರೆ ಕಾರ್ಯಕರ್ತರು.
* ಅಂಚೆ ಮೂಲಕ ಸಂಸ್ಕೃತ ಶಿಕ್ಷಣವೂ (Samskritam through Correspondence) ನಡೆಯುತ್ತಿದೆ.
* ಕಳೆದ ವರ್ಷ ಸಂಸ್ಕೃತ ಭಾರತಿಯ ವತಿಯಿಂದ ಪ್ರಾಥಮಿಕ-ಮಾಧ್ಯಮಿಕ ಪ್ರಗತಿ ಹಂತದಲ್ಲಿ ಒಟ್ಟು 47 ತರಗತಿಗಳಲ್ಲಿ ನಡೆದವು. ಅದರಲ್ಲಿ 700ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.
* 55 ಸಾಪ್ತಾಹಿಕ ಪಠನ ಕೇಂದ್ರಗಳು (Weekly Study Groups) ನಡೆದವು. ಅದರಲ್ಲಿ 600ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದರು.
* ಗಂಗೋತ್ರೀ, ಜಾಹ್ನವೀ, ಕಾವೇರೀ ಎಂಬ ಹೆಸರಿನಲ್ಲಿ 3 ಸವಸತಿಕ ಕುಟುಂಬಶಿಬಿರಗಳು (Residential family camps) ನಡೆದವು. ಇದರಲ್ಲಿ 250ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.
* ಪ್ರಜ್ಞಾ, ಶ್ರದ್ಧಾ ಎಂಬ ಶಿಬಿರಗಳು ಯುವಕರಿಗಾಗಿ ನಡೆಯಿತು. ಇದರಲ್ಲಿ 32 ಯುವಕರು ಭಾಗವಹಿಸಿದ್ದರು.
* 16 ಸಾರ್ವಜನಿಕ ಸಭೆಗಳು (Public Programes) ನಡೆದವು. ಇದರಲ್ಲಿ 1000ಕ್ಕೂ ಹೆಚ್ಚು ಜನ ಸಹಭಾಗಿಗಳಾಗಿದ್ದರು.

ಈ ಎಲ್ಲ ಮಾಹಿತಿಗಳು ಸಂಸ್ಕೃತವು ವಿಶ್ವಭಾಷೆಯಾಗಿ ಪರಿಣಮಿಸುತ್ತಿದೆ ಎಂಬುದನ್ನು ದೃಢೀಕರಿಸುತ್ತವೆ.

❑ **ಡಾ. ನಾಗರತ್ನಾ ಹೆಗಡೆ**

*** ಲಂಡನ್ ನಗರದ 'ಸೇಂಟ್ ಜೇಮ್ಸ್ ಇಂಡಿಪೆಂಡೆಂಟ್ ಸ್ಕೂಲ್' ಎಂಬ ಶಾಲೆಯಲ್ಲಿ ಒಂದನೇ ತರಗತಿಯಿಂದ ಕಡ್ಡಾಯವಾಗಿ ಸಂಸ್ಕೃತವನ್ನು ಕಲಿಸಲಾಗುತ್ತಿದೆ. ಈ ರೀತಿಯ ಏಳು ಶಾಲೆಗಳು ಬೇರೆ ಬೇರೆ ದೇಶಗಳಲ್ಲಿವೆ.**

*** ಅಮೇರಿಕೆಯ ನ್ಯೂಜರ್ಸಿಯಲ್ಲಿರುವ ಸೆಟನ್ ಹಾಲ್ ವಿಶ್ವವಿದ್ಯಾಲಯದಲ್ಲಿ ಭಗವದ್ಗೀತೆಯ ಓದು ಕಡ್ಡಾಯವಾಗಿದ್ದು 10,800 ಜನರು ಅದರ ಲಾಭ ಪಡೆಯುತ್ತಿದ್ದಾರೆ.**

# ವಾರ್ತಾ ವಿಭಾಗ

## ಮೈಸೂರು ವಿಭಾಗದ 2010-11ನೇ ಶೈಕ್ಷಣಿಕ ಸಾಲಿನ ಸಂಸ್ಕೃತ ಪಾಠಶಾಲಾ/ಮಹಾಪಾಠಶಾಲಾ ಶಿಕ್ಷಕರ ತರಬೇತಿ ಶಿಬಿರ

2010-11ನೇ ಶೈಕ್ಷಣಿಕ ಸಾಲಿನ ಸಂಸ್ಕೃತ ಪಾಠಶಾಲಾ/ಮಹಾಪಾಠಶಾಲಾ ಶಿಕ್ಷಕರ ತರಬೇತಿ ಶಿಬಿರ ಮೈಸೂರು ವಿಭಾಗದಲ್ಲಿ ಎರಡು ತಂಡಗಳಲ್ಲಿ (ಎ ಮತ್ತು ಬಿ) ನಡೆಯಿತು.

'ಎ' ತಂಡದ ತರಬೇತಿ ಶಿಬಿರವು ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆ.ಎಸ್.ಎಸ್. ಸಂಸ್ಕೃತ ಪಾಠಶಾಲೆಯಲ್ಲಿ ದಿನಾಂಕ 20.9.2010ರಿಂದ 24.9.2010ರವರೆಗೆ 5 ದಿವಸಗಳವರೆಗೆ ನಡೆಯಿತು.

ದಿನಾಂಕ 20.9.2010ರಂದು ಬೆಳಿಗ್ಗೆ 10 ಗಂಟೆಗೆ ತರಬೇತಿಯನ್ನು ಮೈಸೂರು ವಿಭಾಗದ ಸಂಸ್ಕೃತ ವಿಷಯ ಪರಿವೀಕ್ಷಕರಾದ ವಿದ್ವಾನ್ ಕೆ. ಗಂಗಣ್ಣನವರು ಮತ್ತು ಜೆ.ಎಸ್.ಎಸ್. ಮಹಾವಿದ್ಯಾಪೀಠದ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಶೇಷಗಿರಿರಾವ್ ಅವರು ಉದ್ಘಾಟಿಸಿದರು.

ಪ್ರತಿದಿನ ಒಬ್ಬರಂತೆ ಸಂಪನ್ಮೂಲ ವ್ಯಕ್ತಿಗಳು ಗದ್ಯ, ಪದ್ಯ, ವ್ಯಾಕರಣ ಇನ್ನಿತರ ವಿಚಾರಗಳ ಬಗ್ಗೆ ತಿಳಿಸಿಕೊಟ್ಟರು. ಸಂಪನ್ಮೂಲ ವ್ಯಕ್ತಿಗಳಾಗಿ ಮಹಾರಾಜ ಸಂಸ್ಕೃತ ಕಾಲೇಜಿನ ಸಹಪ್ರಾಧ್ಯಾಪಕರಾದ ವಿದ್ವಾನ್ ಗಂಗಾಧರ ವಿ. ಭಟ್‌ರವರು ತರ್ಕಶಾಸ್ತ್ರದ ಬಗ್ಗೆ ತಿಳಿಸಿಕೊಟ್ಟರು. ವಿದ್ವಾನ್ ಮುರಳೀಧರ್‌ರವರು ಪ್ರಯೋಗಗಳ ಬಗ್ಗೆ ತಿಳಿಸಿಕೊಟ್ಟರು. ಮಹರ್ಷಿ ಪಬ್ಲಿಕ್ ಶಾಲೆಯ ಸಂಸ್ಕೃತ ಶಿಕ್ಷಕರಾದ ಎ. ಕುಮಾರ್‌ರವರು ವ್ಯಾಕರಣ ಸುಬಂತ, ಸಿ.ಕೆ.ಸಿ. ಕಾನ್ವೆಂಟ್‌ನ ಸಂಸ್ಕೃತ ಶಿಕ್ಷಕರಾದ ಕೃಷ್ಣರವರು ಗದ್ಯ ಪಾಠದ ಬಗ್ಗೆ ತಿಳಿಸಿಕೊಟ್ಟರು.



ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆ ಸಹನಿರ್ದೇಶಕರಾದ ಶ್ರೀ ಎನ್. ಕುಮಾರಸ್ವಾಮಿ ಅವರು ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿದರು.

ಶಿಬಿರದ ವಿಶೇಷವೆಂದರೆ ಎರಡು ಜಿಲ್ಲೆಗಳಿಂದ ಆಗಮಿಸಿದ್ದ ಶಿಬಿರಾರ್ಥಿಗಳು ಪ್ರತಿ ಸಂಸ್ಕೃತ ಪಾಠಶಾಲೆಯ ಒಬ್ಬ ಶಿಕ್ಷಕರು ಒಂದೊಂದು ವಿಷಯದ ಬಗ್ಗೆ ತಮ್ಮ ತಮ್ಮ ಶೈಲಿಯಲ್ಲಿ ಅರಿವು ಮೂಡಿಸಿದರು.

ದಿನಾಂಕ 24.9.2010ರಂದು ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭವು ನಡೆಯಿತು. ಮೈಸೂರು ಮಹಾರಾಜ ಸಂಸ್ಕೃತ ಪಾಠಶಾಲೆಯ ಪ್ರಾಂಶುಪಾಲರಾದ ಡಾ. ಭಾಷ್ಯಂ ಸ್ವಾಮೀಜಿಯವರು ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಶ್ರೀ ಎನ್. ಕುಮಾರಸ್ವಾಮಿ, ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜೆ.ಎಸ್.ಎಸ್. ಮಹಾವಿದ್ಯಾಪೀಠದ ಉಪಕಾರ್ಯದರ್ಶಿಗಳಾದ ಎಸ್. ಶಿವಕುಮಾರಸ್ವಾಮಿ ಹಾಗೂ ಸುತ್ತೂರು ಕ್ಷೇತ್ರದ Co-ordinator ತ್ರಿಪುರಾಂತಕರವರು ಆಗಮಿಸಿದ್ದರು. ಈ ಎಲ್ಲಾ ತರಬೇತಿ ಹಾಗೂ ಕಾರ್ಯಕ್ರಮವು ವಿದ್ವಾನ್ ಕೆ. ಗಂಗಣ್ಣನವರ ಉಪಸ್ಥಿತಿಯಲ್ಲಿ ತುಂಬಾ ವ್ಯವಸ್ಥಿತವಾಗಿ ನಡೆಯಿತು. ಶಿಬಿರಾರ್ಥಿಗಳಿಗೆ ಸಹನಿರ್ದೇಶಕರಾದ ಎನ್. ಕುಮಾರಸ್ವಾಮಿಯವರು ಪ್ರಮಾಣಪತ್ರಗಳನ್ನು ವಿತರಿಸಿದರು. ತರಬೇತಿ ಶಿಬಿರವು ಪರಮಪೂಜ್ಯ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಆಶೀರ್ವಾದ ಮತ್ತು ಮಾರ್ಗದರ್ಶನದಲ್ಲಿ ಅಚ್ಚುಕಟ್ಟಾಗಿ ನೆರವೇರಿತು.

'ಬಿ' ತಂಡದ ತರಬೇತಿ ಶಿಬಿರವು ಹಾಸನದ ಶ್ರೀ ಆದಿಚುಂಚನಗಿರಿ ಶಾಖಾ ಮಠದ ಸಂಸ್ಕೃತ ಪಾಠಶಾಲೆಯಲ್ಲಿ ದಿನಾಂಕ 27.9.2010ರಿಂದ 1.10.2010ರವರೆಗೆ ಐದು ದಿವಸಗಳವರೆಗೆ ನಡೆಯಿತು. ಶ್ರೀ ಆದಿಚುಂಚನಗಿರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಚಂದ್ರಶೇಖರ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಪ್ರೊ. ನರಹರಿ, ವಿದ್ವಾನ್ ಪರಮೇಶ್ವರಭಟ್, ವಿದ್ವಾನ್ ಗಂಗಾಧರಭಟ್, ವಿದ್ವಾನ್ ಮುರಳೀಧರ್, ವಿದ್ವಾನ್ ಕುಮಾರ್‌ರವರು ಆಗಮಿಸಿ, ಗದ್ಯ, ಪದ್ಯ, ವ್ಯಾಕರಣ ಹಾಗೂ ಇನ್ನಿತರ ವಿಚಾರಗಳ ಬಗ್ಗೆ ತಿಳಿಸಿಕೊಟ್ಟರು. ಇಲ್ಲಿಯೂ ಸಹ ಶಿಬಿರಾರ್ಥಿಗಳು ಪ್ರತಿದಿನ ಪಠ್ಯಪುಸ್ತಕದ ಒಂದೊಂದು ವಿಷಯದ ಬಗ್ಗೆ ತಿಳಿಸಿಕೊಟ್ಟರು. ಶಿಬಿರಕ್ಕೆ ಆಗಮಿಸಿದ ಶಿಬಿರಾರ್ಥಿಗಳಿಗೆ ಶ್ರೀ ಆದಿಚುಂಚನಗಿರಿ ಶಾಖಾ ಮಠದಲ್ಲಿ ವಸತಿ ವ್ಯವಸ್ಥೆಯನ್ನು ಪರಮಪೂಜ್ಯ ಶ್ರೀ ಶಂಭುನಾಥ ಸ್ವಾಮಿಗಳು ಕಲ್ಪಿಸಿಕೊಟ್ಟಿದ್ದರು.



**ಸಮಾರೋಪ ಸಮಾರಂಭಕ್ಕೆ ಆಗಮಿಸುತ್ತಿರುವ ಗಣ್ಯರಿಗೆ ಪೂರ್ಣಕುಂಭ ಸ್ವಾಗತ.**

ದಿನಾಂಕ 1.10.2010ರಂದು ಸಂಜೆ 4 ಗಂಟೆಗೆ ಹಾಸನದಲ್ಲಿರುವ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠದ ಪರಮಪೂಜ್ಯ ಶ್ರೀ ಶ್ರೀ ಶಂಭುನಾಥಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಸಮಾರೋಪ ಸಮಾರಂಭವು ನಡೆಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯ ಮೈಸೂರು ವಿಭಾಗದ ಸಹ ನಿರ್ದೇಶಕರಾದ ಶ್ರೀ ಎನ್. ಕುಮಾರಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಆದಿಚುಂಚನಗಿರಿ ಕ್ಷೇತ್ರದ ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದಾಗಮ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಸಿ. ನಂಜುಂಡಯ್ಯ ಅವರು ಆಗಮಿಸಿದ್ದರು. ಈ ಎಲ್ಲಾ ತರಬೇತಿ ಹಾಗೂ ಕಾರ್ಯಕ್ರಮವು ವಿದ್ವಾನ್ ಕೆ. ಗಂಗಣ್ಣನವರ ಉಪಸ್ಥಿತಿಯಲ್ಲಿ ನಡೆಯಿತು.



**ದಿನಾಂಕ: 25.02.2010ರಂದು ನಡೆದ ರಾಜ್ಯಮಟ್ಟದ ಸ್ಪರ್ಧೆಗಳ ಸಮಾರೋಪ ಸಮಾರಂಭದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಾದ ಶ್ರೀ ಹರೀಶ್ ಗೌಡ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ (ಸಂಸ್ಕೃತ) ಉಪನಿರ್ದೇಶಕರಾದ ವೀಣಾ ನಾಯಕ್, ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರೌಢಶಿಕ್ಷಣ) ನಿರ್ದೇಶಕರಾದ ಚಿದ್ರೇ ಶಂಕರಯ್ಯ ಪಾಲ್ಗೊಂಡಿದ್ದರು.**

# ಬೆಳಗಾಂವ ಹಾಗೂ ಗುಲಬರ್ಗಾ ವಿಭಾಗದ ಸಂಸ್ಕೃತ ಪಾಠಶಾಲಾ ಶಿಕ್ಷಕರ ತರಬೇತಿ ಶಿಬಿರ

ಬೆಳಗಾವಿ ಹಾಗೂ ಗುಲಬರ್ಗಾ ವಿಭಾಗದ ಸಂಸ್ಕೃತ ಪಾಠಶಾಲಾ ಶಿಕ್ಷಕರ ತರಬೇತಿ ಶಿಬಿರವು ದಿನಾಂಕ 11.11.2010ರಿಂದ 14.11.2010ರವರೆಗೆ ಬಾದಾಮಿ ತಾಲ್ಲೂಕಿನ ಸುಕ್ಷೇತ್ರ ಶ್ರೀ ಶಿವಯೋಗ ಮಂದಿರದ ಉತ್ತಮ ವ್ಯವಸ್ಥೆಯಲ್ಲಿ ನಡೆಯಿತು.

ಈ ತರಬೇತಿ ಶಿಬಿರದ ಉದ್ಘಾಟನೆಯ ಸಮಾರಂಭವು ದಿನಾಂಕ 11.11.2010ರಂದು ಮುಂಜಾನೆ 11 ಘಂಟೆಗೆ ಶ್ರೀ ವೇದಮೂರ್ತಿ ಮುಚಖಂಡಯ್ಯನವರ ಘನ ಅಧ್ಯಕ್ಷತೆಯಲ್ಲಿ ನೆರವೇರಿತು. ಶಿಬಿರದ ಉದ್ಘಾಟಕರಾಗಿ ಹುಬ್ಬಳ್ಳಿಯ ಶ್ರೀ ಆರ್.ಎನ್. ಶೆಟ್ಟಿ ಹೆಣ್ಣುಮಕ್ಕಳ ಮಾಧ್ಯಮಿಕ ಶಾಲೆಯ ಮುಖ್ಯಾಧ್ಯಾಪಕರಾದ ವಿದ್ವಾನ್ ಪರಮೇಶ್ವರ ಭಟ್ಟರು ಆಗಮಿಸಿ, ಸಂಸ್ಕೃತ ಭಾಷೆಯ ಮಹತ್ವ, ಅದರ ಉಪಯುಕ್ತತೆ, ಭಾಷಾ ಬೆಳವಣಿಗೆಯ ಬಗೆಗೆ ವಿವಿಧ ರೀತಿಯಲ್ಲಿ ಹೇಳಿದರು.

ಗುಲಬರ್ಗಾ ವಿಭಾಗದ ಸಂಸ್ಕೃತ ವಿಷಯ ಪರಿವೀಕ್ಷಕರಾದ ಶ್ರೀ ವಿ.ಎನ್. ಜೋಶಿ ಮುಖ್ಯ ಅತಿಥಿಗಳಾಗಿ ಸಂಸ್ಕೃತ ಶಿಕ್ಷಕರಲ್ಲಿ ಇರುವ ಗುಣಗಳು ಹಾಗೂ ಭಾಷೆಯ ಮಹತ್ವವನ್ನು ತಿಳಿಸಿಕೊಟ್ಟರು. ಶ್ರೀ ಎಸ್.ಬಿ. ದಾನಪ್ಪಗೌಡರು ಸಂಸ್ಕೃತ ವಿಷಯ ಪರಿವೀಕ್ಷಕರು, ಬೆಳಗಾವಿ ವಿಭಾಗ ಇವರು ಉದ್ಘಾಟಕರ ಪರಿಚಯ ಮಾಡಿಕೊಟ್ಟರು ಮತ್ತು ತರಬೇತಿ ಶಿಬಿರದ ಉದ್ದೇಶವನ್ನು ತಿಳಿಸಿಕೊಟ್ಟರು.

ಶ್ರೀ ಎಸ್.ಸಿ. ಬಸಾಪೂರ, ಸಹಶಿಕ್ಷಕರು ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀ ಎಸ್.ಜಿ. ನಿಡಗುಂದಿ, ಮುಖ್ಯ ಗುರುಗಳು ಇವರು ವಂದನಾರ್ಪಣೆ ಮಾಡಿದರು.

ಈ ತರಬೇತಿ ಶಿಬಿರದಲ್ಲಿ ಬೆಳಗಾವಿ, ಬಾಗಲಕೋಟೆ, ಬಿಜಾಪುರ ಹಾಗೂ ಚಿಕ್ಕೋಡಿ ಜಿಲ್ಲೆಗಳು ಹಾಗೂ ಗುಲಬರ್ಗಾ ವಿಭಾಗದ ಸಂಸ್ಕೃತ ಪಾಠಶಾಲೆಯ ಶಿಕ್ಷಕರು ಭಾಗವಹಿಸಿದ್ದರು. ಇಲ್ಲಿ 80 ಸಂಸ್ಕೃತ ಶಿಕ್ಷಕರು ಶಿಬಿರದಲ್ಲಿ ಭಾಗವಹಿಸಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ವಿದ್ವಾನ್ ಪರಮೇಶ್ವರ ಎಂ. ಭಟ್ಟ ಹಾಗೂ ಸಂಗಮೇಶ ಅಚನೂರ ಇವರು ಆಗಮಿಸಿದ್ದರು. ಸಂಸ್ಕೃತ ಗದ್ಯ ಹಾಗೂ ಪದ್ಯ ಭಾಗಗಳ ಪಾಠಬೋಧನೆ ಮಾಡುವ ರೀತಿಯನ್ನು ತಿಳಿಸಿಕೊಟ್ಟರು.

ದಿನಾಂಕ 12, 13.11.2010ರಿಂದ ಸಂಸ್ಕೃತ ಪಾಠಶಾಲಾ ಶಿಕ್ಷಕರೇ ಸ್ವತಃ ಪಾಠಬೋಧನೆಯನ್ನು ಮಾಡಿದರು. 14.11.2010ರಂದು ಸಮಾರೋಪ ಸಮಾರಂಭದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ❑



ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ನಡೆದ ಭಗವದ್ಗೀತಾ ಕಂಠಪಾಠ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಬಹುಮಾನ ವಿತರಿಸಿದರು. ಡಾ. ದೊಡ್ಡರಂಗೇಗೌಡ, ಡಾ. ಚಿದಾನಂದಗೌಡ, ಮಾಜಿ ಸಚಿವರಾದ ರಾಮಚಂದ್ರೇಗೌಡ, ಇತರರು ಉಪಸ್ಥಿತರಿದ್ದರು.



ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ವಿದ್ವತ್ ಪದವೀಧರರಿಗೆ ಪ್ರಮಾಣಪತ್ರ ವಿತರಿಸುವ ಸಮಾರಂಭವನ್ನು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ನೆರವೇರಿಸಿದರು. ಶಿಕ್ಷಣ ಸಚಿವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ವಿಧಾನ ಪರಿಷತ್ ಸದಸ್ಯೆ ಡಾ. ಎಸ್.ಆರ್. ಲೀಲಾ ಹಾಜರಿದ್ದರು.

# कर्णाटकसंस्कृतविश्वविद्यालयस्य पृष्ठभूमिका

संस्कृतम् इति श्रवणमात्रेण केचन उत्कर्णाः भवन्ति, अन्ये केचन उपेक्षन्ते, इतरे केचन औदासीन्यं प्रकटयन्ति, अपरे केचन चकिताः भवन्ति, केचन भयम् अनुभवन्ति । केचन तु इयम् अस्मदीयभाषा इति प्रीत्या आलिङ्गन्ति । देवभाषा, पवित्रभाषा, हिन्दुसंस्कृतेः प्रतिनिधीभूता, वर्गीयभाषा इति च विविधाः जनाः विभिन्नैः प्रकारैः चिन्तयन्ति ।

संस्कृतभाषायाः परम्परा श्रेष्ठा प्राचीना च वर्तते। उत्तमोत्तमसाहित्ययुक्ता इयं भाषा सम्पद्भरिता च।

सर्वविधविरोधानां मध्येऽपि अस्याः भाषायाः गरिमा सार्वकालिकः सार्वत्रिकः च । अस्मिन् युगे सर्वजातिवर्गीयैः अपि प्राप्तुं (अध्येतुं) योग्या इयं भाषा। एतद्विषये दिनपत्रिकासु अनेके लेखाः प्रकाशिताः सन्ति। इयं न मृता, अपि तु अमृता। वृद्धिस्तरे स्थिता इयं सार्वजनीना वर्तते । न केवलं तावत्, इयं मस्तिष्कं तीक्ष्णं करोति (Brain Sharper) संस्कृतभाषायां सर्वे विषयाः उपलभ्यन्ते।

संस्कृतं भारतस्य आत्मा । एषा अस्माकं राष्ट्रभाषा अपि । यदि वयं भारतीयसंस्कृतिम् इच्छामः तर्हि अस्माभिः दैनन्दिनजीवने संस्कृतम् आश्रयितव्यम् इति रामाजोयिसवर्यस्य आशयः । संस्कृतं कस्यचित् वर्गस्य सीमिता भाषा इति मिथ्याकल्पनातः जनैः बहिः आगन्तव्यम् इति निवृत्तन्यायमूर्तेः डा॥ रामाजोयिसवर्यस्य वचनम् अत्र स्मरणीयम् । डा ॥ रामाजोयिसमहाशयः वदति यत् – संस्कृते किमपि नास्ति इति बहवः चिन्तयन्ति । यतः संस्कृते किम् अस्ति इति ते न जानन्ति। अत एव संस्कृते सर्वम् अस्ति इति ज्ञापयितुम् एव कर्णाटके संस्कृतविश्वविद्यालयः आरब्धः इति।

भारतस्य संविधाने भाषाध्ययनस्वातन्त्र्यं सर्वेभ्यः अपि समानरीत्या कल्पितम् अस्ति इति सामाजिकैः अवगन्तव्यम् ।

संस्कृतविश्वविद्यालयस्य विधेयकाङ्गीकारस्य पृष्ठभूमिविषये भाषणं कुर्वता कर्णाटकराज्यस्य मुख्यमन्त्रिणा डा. बि. एस्. यडियूरप्पवर्येण उक्तम् – इयं दैवीवाक् संस्कृतभाषा प्रपञ्चाय आदर्शम् उदात्तं च चिन्तनं दत्तवती अस्ति । भाषागता ज्ञानसम्पत् सामान्यजनैः अपि प्राप्येत । तदेव कर्णाटकसंस्कृतविश्वविद्यालयस्य लक्ष्यम् । इयं सर्वभाषाणां जननी। अग्रिमसन्ततये इयं प्रापणीया इति वचनम् अत्र अवश्यं स्मर्तव्यम् ।

ये संस्कृताध्ययनम् अकुर्वन्, ते तस्याः भाषायाः महत्त्वं जानन्ति । अपि च मनुष्याणां स्वभावे परिवर्तनस्य आनयनाय संस्कृतविश्वविद्यालयः भवेत् एव इति कर्णाटकस्य के.पि.सि.सि कार्याध्यक्षेण श्री डि.के.शिवकुमारमहाभागेन उक्तम् अपि अवधातव्यम् ।

संस्कृतं नाम ज्ञानभाण्डागारम्। किन्तु अस्य भाण्डागारस्य कुञ्चिका लुप्ता अस्ति। लुप्तायाः कुञ्चिकायाः अन्वेषणप्रयत्नः एव संस्कृत-विश्वविद्यालयारम्भः इति सचिवः डा. वि. एस्. आचार्यमहोदयः अवदत् ।

संस्कृतं कस्यचित् वर्गस्य सीमितं न भवेत्, अपि तु सर्वस्पर्शि स्यात् । एतस्यां दिशि संस्कृतविश्वविद्यालयः आधारभूतः भवतु इति सभापतिः श्री वीरण्ण मत्तीकर्वर्यः उक्तवान् आसीत्।

संस्कृतभाषाविषये, संस्कृताध्ययनाध्यापनविषये च सर्वत्र देशे जनाः समाहिताः भवेयुः।

सर् मिर्जा इस्मायिल्, फखरुद्दीन् अलि अहमद्,

डा ॥ राजारामण्णः, महर्षिः दयानन्द सरस्वती, डा. एस् राधाकृष्णन्, के आर् नारायणन्, जवाहरलाल नेहरू, महात्मा गान्धी, श्री अरविन्दः, प्रो. मेक्डोनेल्, सर् विलियं जोन्स्, म्याक्स् म्यूलर्, विल् ुराण्ट्, अल्बर्ट् ऐन्स्टीन्, मार्क् ट्वैन् इत्यादयः महानुभावाः संस्कृतस्य महत्त्वविषये काले काले स्वाभिप्रायं प्रकटितवन्तः सन्ति ।

जन्मतः मरणपर्यन्तम् अपि प्रचाल्यमानाः संस्काराः संस्कृते एव निर्दिष्टाः सन्ति । ते च जनैः पाल्यमानाः अपि सन्ति ।

संस्कृतस्य अध्ययनेन विना भारतीयता न सिद्ध्यति, पाण्डित्यम् अपि न प्राप्यते इति महात्मागान्धिवर्यस्य वचनम् अत्र अवश्यं स्मर्तव्यम् ।

कर्णाटकसर्वकारेण संस्कृतपाठशालाद्वारा प्रथमा – काव्य – साहित्य – विद्वत् –कक्ष्याः चाल्यमानाः सन्ति । तादृशीनां पाठशालानां संस्कृतमहाविद्यालयानां च छात्राणां संस्कृताध्ययने काचित् समानता स्यात्, छात्राः अध्यापकाः च उन्नताध्ययनस्य अवकाशं प्राप्नुयुः, राष्ट्रिय–अन्ताराष्ट्रियस्तरे संस्कृताध्ययनद्वारा संवादाय काचित् उन्नतशिक्षणसंस्था निर्मिता भवतु इति महदाशयेन एव कर्णाटकसंस्कृतविश्वविद्यालयः २०१० तमे वर्षे आरब्धः ।

वैज्ञानिक–साहित्यिक–सांस्कृतिक–सम्प्रदायपरम्परायुक्ता इयं भाषा उज्ज्वला प्राचीना च । अपि च गद्य–पद्य–नाटक–नाव्य–शिल्प–कला–वर्णचित्र–ललितकला–वैद्यशास्त्र–तत्त्वज्ञानक्षेत्रेषु एतत्सम्बद्धेषु इतरक्षेत्रेषु च भारतीयविद्वद्भिः महत् साधितम् अस्ति । ततोऽपि व्यापकरूपेण चिरन्तनरूपेण वरदानं कृतवत्याः अस्याः भाषायाः अभिवृद्ध्यै एव संस्कृत–विश्वविद्यालयः अवश्यम् आरब्धः भवेत् । अयञ्च विश्वविद्यालयः संशोधनक्षेत्रे प्रगतिम् अभिवृद्धिं च साधयेत् इति धिया एव विश्वविद्यालयस्य ध्येयोद्देशसहितः कर्णाटकसंस्कृतविश्वविद्यालयस्य अधिनियमः २००९ तमे वर्षे कृतः । तदनुसारं २०१० तमवर्षस्य एप्रिल्–सप्तमदिनाङ्कितं मान्यराज्यपालवर्यस्य अनुमतिपत्रपृष्ठभूम्या एप्रिल् ९, २०१० तमे दिनाङ्के कर्णाटकराज्यपत्रम् अधिकृतरूपेण प्रकटितम् अस्ति ।


❑ **डा. चन्द्रमौलि एस्. नाय्करः**
कुलसचिवः
**कर्णाटकसंस्कृतविश्वविद्यालयः**


## विद्वत्सु निवेदनम्

कर्णाटकसंस्कृतविश्वविद्यालयः "कर्णाटकसंस्कृताध्ययनम्" इति षाणमासिकीं पत्रिकां प्रकाशयिष्यति । इयं पत्रिका द्विभाषायुक्ता (संस्कृतभाषया आङ्गलभाषया च) भविष्यति । आसक्ताः संस्कृतभाषा–साहित्यविज्ञानसम्बद्धान् लेखान् प्रेषयितुम् अर्हन्ति । पत्रस्य एकस्मिन् पार्श्वे एव लेखनं भवतु । ई मेल् द्वारा अपि लेखाः प्रेषयितुं शक्यन्ते ।

सङ्केतः – **ಸಂಪಾದಕರು, ಕರ್ನಾಟಕ ಸಂಸ್ಕೃತಾಧ್ಯಯನಮ್** (ಷಾಣ್ಮಾಸಿಕ ಪತ್ರಿಕೆ)
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
**ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ**
**ಚಾಮರಾಜಪೇಟೆ, ಬೆಂಗಳೂರು – 560 018.**
Email: karnatakasanskrituniversity@gmail.com

# कर्णाटकसंस्कृतविश्वविद्यालयः – वर्तमाने, भविष्यत्काले च

**प्रस्तावः –**

संस्कृतभाषायाः, साहित्यस्य, शास्त्राणां च अभिवृद्ध्यर्थम् कर्णाटकसर्वकारेण संस्कृतविश्वविद्यालयः संस्थापितः । मार्किं १५० वर्षेभ्यः पूर्वम् मैसूरुमहाराजस्य आश्रये आरब्धं संस्कृताध्यापनं क्रमेण श्रीमन्महाराज–संस्कृतमहापाठशालारूपेण प्रतिष्ठापितम् अभवत् । अनन्तरकाले बेङ्गलूरुनगरे चामराजेन्द्रसंस्कृत–महापाठशाला आरब्धा । अनेकेषु मठेषु वेदपाठशालाः, संस्कृतपाठशालाः च आरब्धाः । धनिकानां, विद्यापोषकाणां च आर्थिकसाहाय्येन प्रकारान्तरेणापि संस्कृताध्ययनं प्रवृद्धम् । स्वातन्त्र्यानन्तरं विश्वविद्यालयेषु, प्रौढशालासु च संस्कृतस्य पूरकं (अनुकूलम्) स्थानम् एव आसीत् । किन्तु गच्छता कालेन विद्यालयेषु, महाविद्यालयेषु, विश्वविद्यालयेषु च संस्कृतभाषा, साहित्यं, शास्त्राभ्यासाश्च क्षीणाः अभवन् । अनया पृष्ठभूम्या २०१० तमे वर्षे भारतीयजनता–पक्षसर्वकारेण दक्षिणभारते कर्णाटके राज्यस्तरीयः संस्कृतविश्वविद्यालयः संस्थापितः ।

**प्रमुखाणि उद्देश्यानि –**

* संशोधनस्य बोधनस्य च निमित्तं समानरूपेण विश्वविद्यालये व्यवस्थायाः परिकल्पनम् ।
* उन्नतशिक्षणे भारतीयशास्त्रैः सह अन्तर्विभागीयाध्ययनस्यापि प्रकल्पनम् ।
* यथा – योगः, आयुर्वेदः, ज्योतिर्विज्ञानं, गणितशास्त्रं, ज्यौतिषम् इत्यादीनां भारतीय–विज्ञानशाखानां संशोधनं प्रवर्धनं च ।
* प्राचीनज्ञानम् आधुनिकज्ञानं च सङ्कलय्य, तद्द्वारा नूतनतौलनिकाध्ययनस्य योजना ।
* उन्नताध्ययने एम्. ए, पि.एच्.डि, (विद्यावारिधिः) संयुक्ताध्ययनयोजनापूर्वकं संशोधनविषये आधिक्येन प्राशस्त्यकल्पनम् ।
* प्राचीन–नवीनशास्त्रेषु "डिप्लोमा" कोर्स् आयोजनम् ।
* छात्रेषु भाषाप्रज्ञायाः शास्त्रप्रज्ञायाश्च जागरणम् । आन्वयिकपद्धतेः प्रोत्साहः ।
* प्राचीननूतनलेखकानां, विदुषां च अप्रकाशित–कृतीनां मूल–अनुवाद–टिप्पणीभिः सह प्रकाशनम् । कन्नडभाषायां विद्यमानानां मौलिकानां श्रेष्ठकृतीनां च संस्कृतभाषया अनूद्य प्रकाशनम् ।
* उपमण्डलस्तरे, मण्डलस्तरे, राज्यस्तरे च संस्कृतभाषासंबद्धानां, प्राचीनज्ञानसंबद्धानां उपन्यासानाम् आयोजनम् । उन्नताध्ययनाय योग्यवातावरणनिर्माणं च ।
* कञ्चित् संस्कृतभाषागणं सज्जीकृत्य ग्रामेषु, उपमण्डलेषु, मण्डलेषु च संस्कृतोत्सवः, संस्कृतसाहित्योत्सवः, संस्कृतनाटकोत्सवः, प्राचीनसंस्कृतविज्ञानोत्सवः च व्यापकरूपेण यथा प्रचलेत् तथा प्रेरणादानम् ।
* दूरशिक्षणद्वारा संस्कृताध्यापनम् ।
* राज्यस्य सर्वेषु क्षेत्रेषु सायङ्काले विरामदिनेषु च रामायणभगवद्गीतादिद्वारा संस्कृतबोधनम् ।
* प्रतिपञ्चदशदिनं संस्कृतनाटकानाम् आयोजनं, तदर्थं प्रोत्साहदानं च ।
* भाषाक्षेत्रे, साहित्यक्षेत्रे, शास्त्राध्यापने च येषां योगदानं, तेभ्यः राज्योत्सवादिप्रशस्तिपूरकतया प्रतिस्पन्दः ।
* वेदाध्ययनाय प्रेरणा, वेदकार्यक्रमाणां सि. डि, डि.वि.डि द्वारा संरक्षणम् ।
* प्रतिवर्षं त्रिभ्यः विद्वद्भ्यः विश्वविद्यालयद्वारा उन्नतप्रशस्तिप्रदानम् ।

* भारतस्य विविधसंस्कृतविश्वविद्यालयानां सहयोगेन नूतनयोजनानां कार्यान्वयनम्, साम्प्रदायिकशैल्या विविधसङ्गोष्ठीनां, कार्यागाराणां, शास्त्रगोष्ठीनां च आयोजनं, प्रवर्धनं च ।

**शैक्षणिककार्याणि –**

* संस्कृतपाठशालासु, विश्वविद्यालयेषु च व्यवस्थायाः समीकरणं, बलवर्धनं च ।
* छात्रवृत्तिदानेन छात्राणां प्रेरणा ।
* पाठशालासु, विश्वविद्यालयेषु च उत्तम-ग्रन्थालयव्यवस्था ।
* विश्वविद्यालयेषु छात्रावासनिर्माणं, स्थानीय-धनदातृणां साहाय्येन, सर्वकारस्य साहाय्येन च छात्रेभ्यः उत्तमरीत्या अशनवसनव्यवस्था ।
* मण्डलस्तरे, उपमण्डलस्तरे च छात्रद्वारा संस्कृतोत्सवाचरणं, संस्कृतप्रतियोगितानाम् आयोजनद्वारा छात्रेषु उत्साहपूरणम् ।
* प्रतिवर्षं विद्वन्मध्यमा-विद्वदुत्तमा-वेदशाखादिषु उत्तमैः अङ्कैः ये सर्वप्राथम्यं प्राप्नुवन्ति, तेभ्यः निधिद्वारा, पीठाधीशानां द्वारा सार्वजनिक-क्षेत्रेभ्यः च धनदानेन प्रोत्साहः, प्रमाणपत्रदानं च ।
* परिशिष्टवर्गीयाणां संस्कृताध्ययनाय प्रत्येक-रूपेण विशेषव्यवस्था ।
* छात्रेभ्यः संस्कृतगान-क्रीडास्पर्धानाम् आयोजनम् ।
* पाठ्यांशे आङ्ग्लभाषायाः सङ्गणकशिक्षणस्य च योजनं, काव्य-साहित्य-विद्वत्कक्ष्यासु अनिवार्यतया प्रकल्पनम् ।
* प्रथमाकक्ष्याम् आ विद्वत्कक्ष्यायाः ये पाठ्यांशाः सन्ति, तेषां पाठ्यांशानां वैज्ञानिकपद्धत्या परिष्कारः, प्राचीनज्ञानम् आधुनिकज्ञानं चेत्युभयमपि यथा सम्मिलितं स्यात् तथा पाठ्यपुस्तकनिर्माणम् ।
* उत्तरकर्णाटके, हैदराबाद्कर्णाटके, उत्तरकन्नडे, दक्षिणकर्णाटके, मध्यकर्णाटके च संस्कृतस्य उन्नतसंशोधनकेन्द्राणाम् उद्घाटनं, तत्र अध्ययनाय संशोधनाय च योग्यवातावरण-निमाणं, स्थानीयानां संस्कृताध्ययनसंस्थानां च सहयोगः ।
* पञ्चाशतः वर्षेभ्यः प्रचाल्यमानासु प्राचीन-संस्कृतपाठशालासु "प्याकेज्" कार्यक्रमाणाम् आयोजनम् । तासु पाठशालासु पीठोपकरणानां संस्कृतग्रन्थानां च व्यवस्थायै प्रोत्साहः ।
* बि.ए, एम्.ए पदवीधराणां समाजे या आद्यता अस्ति, सा विद्वत्पदवीधराणाम् अपि यथा स्यात् तथा व्यवस्था ।

❑ **प्रो. मल्लेपुरं. जि. वेङ्कटेशः**
कुलपतिः
कर्णाटकसंस्कृतविश्वविद्यालयः

**अन्नदानं परं दानं विद्यादानमतः परम् ।**
**अन्नेन क्षणिका तृप्तिः यावज्जीवं च विद्यया ॥**

ಅನ್ನದಾನವು ಶ್ರೇಷ್ಠವಾದ ದಾನ. ಅದಕ್ಕಿಂತಲೂ ಶ್ರೇಷ್ಠವಾದುದು ವಿದ್ಯಾದಾನ.
ಅನ್ನದಾನದಿಂದ ಕ್ಷಣಿಕವಾದ ತೃಪ್ತಿಯು ಸಿಗುತ್ತದೆ. ವಿದ್ಯಾದಾನದಿಂದ
ಜೀವನಪರ್ಯಂತ ತೃಪ್ತಿ ಸಿಗುತ್ತದೆ.

# बोधनेन सह संशोधनस्यापि प्राशस्त्यम्

**प्रो. मल्लेपुरं जि वेङ्कटेशः**

**कन्नडसांस्कृतिकजगतः केषाञ्चन गण्यानां बुद्धिजीविनां विरोधेषु सत्सु अपि कर्णाटकसंस्कृतविश्वविद्यालयः समारब्धः, तस्य विश्वविद्यालयस्य प्रथमकुलपतित्वेन प्रो. मल्लेपुरं जि वेङ्कटेशमहाभागाः नियुक्ताः च । कन्नडपुस्तकप्राधिकारस्य अध्यक्षत्वेन, हम्पिकन्नडविश्वविद्यालयस्य कुलसचिवत्वेन च कार्यं निरूढवतां प्रो. मल्लेपुरं जि वेङ्कटेशमहाभागानां महान् अनुभवः वर्तते । इतोऽपि स्वप्नस्तरे विद्यमानस्य कर्णाटकसंस्कृतविश्वविद्यालयस्य ध्येयोद्देशान् अधिकृत्य कुलपतिमहाभागैः प्रजावाणीपत्रिकां प्रति प्रदत्तस्य सन्दर्शनस्य सङ्ग्रहः अत्र अस्ति ।**

*** नूतनविश्वविद्यालयस्य स्वरूपं कीदृशम् ?**

भौतिकं स्वरूपम् इतःपरं स्पष्टं भवेत् । रामनगरमण्डले मागडि – उपमण्डलस्थे सूरप्पनग्रामे विश्वविद्यालयाय भूमिः दृष्टा अस्ति । सम्प्रति बेङ्गलूरुनगरस्य चामराजपेटेप्रदेशे विद्यमानः कार्यालयः कुलपतीनां केन्द्रकार्यालयत्वेन रक्षणीयः इति चिन्तनं प्रचलति । संस्कृत–विश्वविद्यालयस्य कार्यपृष्ठभूमौ नियमनिरूपणे प्रयत्नाः प्रचलन्तः सन्ति । राज्यविश्वविद्यालयाः, केन्द्रविश्वविद्यालयाः, डीम्ड्(मानित)विश्वविद्यालयाः चेति देशे १४ संस्कृतविश्वविद्यालयाः सन्ति । तेषां विश्वविद्यालयानां कार्यक्रमसम्बद्धस्य संविधानस्य अध्ययनं कृतम् अस्ति । कर्णाटकं, कन्नडसंस्कृतिः, कन्नडभाषा, तस्याः सोदरभाषाः च मनसि निधाय तार्किकसांस्कृतिकचिन्तनापूर्वकं कर्णाटकसंस्कृतविश्वविद्यालयस्य सामान्यं रूपं सिद्धम् अस्ति । गते सार्धैकवर्षावधौ साधितानि कार्याणि एतानि ।

*** विश्वविद्यालयस्य ध्येयोद्देशाः सरलतया कथं वक्तुं शक्यन्ते?**

राज्ये संस्कृतसम्बद्धाः १४ महाविद्यालयाः, २३० संस्कृतपाठशालाः च सन्ति । एतेषु विद्यालयेषु साम्प्रदायिकशिक्षणं दीयते । इतःपरम् एते सर्वेऽपि विद्यालयाः विश्वविद्यालयस्य व्याप्तौ अन्तर्भवन्ति । अत्र त्रिविधं कार्यं भवेत् – व्यवस्थापनं, बलसम्पादनं, समग्रतासम्पादनं चेति । इयम् आर्थिक–सांस्थिक–बौद्धिकप्रक्रिया इत्यपि वक्तुं शक्यते । एतस्यां दिशि संस्कृतविद्यालयः कार्यं निर्वक्ष्यति । अपरं मुख्यम् उद्देश्यं नाम – प्राचीनज्ञाने यत् साधितं, तस्य सर्वस्यापि आधुनिकशाखासु योजनम् । इदं कार्यं विज्ञानविचारादियुक्तं बहुमुखि । अधुना बौद्ध–जैन–तत्त्वशास्त्राणि आङ्ग्लभाषामाध्यमेन अधीयमानानि सन्ति । एतेषाम् अध्ययनं पाली–प्राकृत–अर्धमागधिद्वारा अपि प्रचलेत् । यतो हि साम्प्रदायिकाध्ययनशैल्यां महत् तात्त्विकं जगत् अस्ति । तस्मात् मूलभाषाद्वारा अध्ययनम् अधिकम् अर्थपूर्णं भवति । महाकविना कालिदासेन प्रतिपादिते प्राचीननव्ययोः सामरस्यसाधके विवेकयुतमार्गे मम विश्वासः ।

निरन्तरं ज्ञानस्य अन्वेषणं, तस्य अनावरणं च विश्वविद्यालयस्य अपरं मुख्यम् उद्देश्यम् । एतस्यां दिशि अन्तर्विभागीयाध्ययनस्य तौलनिकाध्ययनस्य च प्राशस्त्यं कल्प्यते ।

*** कन्नडभाषायाः रक्षणाय संस्कृतविश्वविद्यालयः कथं साहाय्यम् आचरति ?**

सम्प्रति जागतीकरणस्य प्रतिरोधरूपेण स्वदेशीया परम्परा दर्श्यमाना अस्ति । अस्मिन् अवसरे कन्नडस्य अध्ययनप्रक्रियायां परिवर्तनम् अपेक्षितम् । यथा – कन्नडकवेः पम्पविषये चिन्तयाम । केवलं कन्नडदृष्ट्या एव पम्पः द्रष्टुं न शक्यः । प्राकृतद्वारा तत्कालीनसांस्कृतिक–विषयाणां द्वारा अवलोक्यते चेत् अस्माभिः पम्पः सम्यक् अवगन्तुं शक्यः । पम्पः अवगतश्चेत् कुवेम्पुवर्यः ततोऽपि स्पष्टः भवति । उपनिषदाम् अध्ययनेन अक्कमहादेवी–बसवण्ण–सर्वज्ञ–वचनानाम् अवगमनं स्फुटतरं भवति । भागवतस्य तत्त्वद्वारा दाससाहित्यं स्पष्टं भवति । संस्कृत–प्राकृतजगता सह कन्नडजगदपि सम्मिलितं स्यात् इति प्रयत्नः विश्वविद्यालयस्य । कन्नडभषायाः अभिवृद्ध्यै हम्पि कन्नडविश्वविद्यालयः अपि परिश्रमं कुर्वाणः वर्तते । इदमेव कार्यं संस्कृत–विश्वविद्यालयः प्रकारान्तरेण करिष्यति । कन्नड–विश्वविद्यालयः संस्कृतविश्वविद्यालयः च सहैव कार्यं कुरुतः चेत् कन्नडभाषायाः एव अधिकः लाभः ।

*** एवं तर्हि संस्कृतविश्वविद्यालयेन कन्नडभाषायाः हानिः भविष्यति इति किं मिथ्यावादः ?**

संस्कृतं कन्नडविरोधि इति चिन्तनम् अकृत्वा उभयोः भाषयोः आन्तरिकसम्बन्धः अवगन्तव्यः । अधुना कन्नडाध्ययनम् एकमुखं वर्तते । एतस्मात् जायमानाः अपायाः अग्रे अनुभोक्तव्याः भवेयुः । कन्नडभाषाविषयिणी दृष्टिः एव परिवर्तेत । न केवलं भाषाशास्त्रदृष्ट्या, अपि तु तात्त्विकजगद्दर्शनेच्छया दृश्यते, तदा संस्कृतस्य अनुसन्धानक्रमः अवगम्यते । संस्कृतात् कन्नडभाषायाः हानिः इति चिन्तनीयं नास्ति । एकविंशतिशतके कन्नडभाषया सम्मुखीक्रियमाणानां स्पर्धाह्वानानां भूमिकायां कन्नडभाषायाः नूतनम् आकारं संस्कृत–प्रतिमारूपाणि एव दातुं समर्थानि भवन्ति । कुवेम्पु–बेन्द्रे–पु.ति.नवर्यैः विभिन्नप्रकारेण इदं दर्शितम् अस्ति । कम्बारवर्येण अपि दर्शितम् अस्ति स्वस्य ज्ञानेन विनैव । कन्नडविद्वत्परम्परायाः नवीनानि बहूनि मुखानि सन्ति इति नव्यकवयः जानन्ति स्म ।

*** संस्कृतं वर्गीयभाषा इति कम्बारवर्यस्य आशयः ..........**

रूढमूलसिद्धान्तदृष्ट्या कम्बारवर्यस्य अभिप्रायः तथा स्यात् । इदानीमपि तेषाम् अन्वयनेनैव अग्रे गन्तुं न शक्यम् । ज्ञानं भावात्मकम् अभावात्मकं च । वर्गीया भिन्नता इति तु बाह्यरूपचिन्तनम् । आन्तरिकरूपं तु एवं नास्ति । संस्कृतावगमनक्रमः अपि अस्माभिः परिवर्तनीयः अस्ति । संस्कृतं ब्राह्मणानां भाषा इति जनाः चिन्तयन्तः सन्ति । ते वर्णाश्रमदृष्ट्या चिन्तयन्ति । संस्कृते एतादृशचिन्तनानाम् अवकाशः नास्ति । “अधिककन्नडङ्गळ”रीत्या संस्कृतेऽपि बहवः प्रकाराः सन्ति । पाली प्राकृतं च संस्कृतस्य अपरः प्रकारः एव । संस्कृतनाटकेषु दृश्यमाना अर्धमागधी जगतः बहुषु भाषाप्रकारेषु अन्यतमा । संस्कृतनाटकेषु दशाधिकानि संस्कृतरूपान्तराणि सन्ति । शङ्कर मोकाशि पुणेकरवर्येण अपि एषः एव आशयः प्रकटीकृतः अस्ति ।

*** संस्कृतविश्वविद्यालयः केसरीकरणस्य कश्चन प्रकारः इत्यपि श्रूयते ......**

अहम् एवं न चिन्तयामि । अस्माकं स्थानात् बहिः स्थित्वा प्रामाणिकतया चिन्तनं करणीयम् । धर्म–जाति–राजकीयपरिधौ एव संस्कृतं न द्रष्टव्यम् ।

*** इतरसंस्कृतविश्वविद्यालयादपि कर्णाटक–संस्कृतविश्वविद्यालयस्य किं वैशिष्ट्यम् ?**

इतरे विश्वविद्यालयाः पाठ्यपुस्तकानाम् आधारेण कार्याणि निर्वहन्ति । सः प्राचीनः क्रमः, ततोऽपि अग्रे गमनम् अस्माकं क्रमः। इतरेषु विश्व–विद्यालयेषु बोधनस्य प्राधान्यम् । अस्माकं विश्वविद्यालयस्य प्रमुखम् उद्देश्यं बोधनं न, संशोधनस्य अध्ययनस्य च अत्र प्राधान्यम्। एतदङ्गतया बोधनं अपि भवत्येव । देशे एव अयं कश्चन अपूर्वः विश्वविद्यालयः। अयं न केवलं कर्णाटकस्य अपि तु भारतस्य, तद्द्वारा जगतः एव आदर्शरूपः भविष्यति ।

*** कुलपतिः सन् भवतः पुरतः विद्यमानानि स्पर्धाह्वानानि ?**

कन्नडसंस्कृतयोः सांस्कृतिकदीपानां शोधः मुख्यं लक्ष्यम् । काव्यानां द्वारा, शासनानां विदेशीयलेखकानां साहित्यद्वारा च इतिहास–निर्माणम् । इतिहासस्य अध्ययनं संस्कृतद्वारा अपि भवेत् । तदा एव कन्नडसंस्कृतेः अध्ययनस्य नूतनरूपं ज्ञातुं शक्नुमः । वर्तमानस्य अवगमनं नाम भूतकालेन सहैव वर्तमानभविष्यतोः निर्माणम्। एतादृश्यां निर्मितिप्रक्रियायां संस्कृतं पार्श्वे स्थापयितुं न शक्यम् । तथा क्रियते चेत् एकम् एव पार्श्वं द्रष्टुं शक्नुमः न तु समग्रम् ।

*** संस्कृतविश्वविद्यालयस्य अग्रिमदिनानि कथं भविष्यन्ति ?**

विश्वविद्यालयस्य परिधेः बहिरपि अपि कार्यकरणम् अस्माकम् उद्देश्यम् । यथा यथा कार्यक्रमाः आधिक्येन भवन्ति तथा तथा जनेषु उत्साहः वर्धते । इदं रहस्यं बहोः कालात् कन्नडभाषया अपि ज्ञातम् अस्ति, संस्कृतेन अपि ज्ञातम् अस्ति ।

(प्रजावाणीकृपातः) ❑ **रघुनाथः च. ह.**

**Book-Post**

ಇಂದ,
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – 560 018.
ದೂರವಾಣಿ: 080 – 2670 1303

ಇವರಿಗೆ,

**Vartha Patram:** *Quarterly news bulletin of Karnataka Samskrit University, Vol. 1, No. 1. Pub. by the* ***Registrar for Karnataka Samskrit University****, Sri Chamarajendra Samskrit College Campus, Pampamahakavi Road, Chamarajapete, Bangalore - 560 018, Phone: 080-2670 1303 & Printed at* ***Satyasri Printers Pvt. Ltd.****, # 16/1, 3rd Cross, 2nd Main, Kasturaba Nagar, Mysore Road, Bangalore - 560 026, Phone: 080-26748811.*